NSDL
Technology, Trust & Reach

ನ್ಯಾಷನಲ್ ಸೆಕ್ಯುರಿಟೀಸ್ ಡಿಪೋಸಿಟರಿ ಲಿಮಿಟೆಡ್

# ಡಿಮ್ಯಾಟ್ ಖಾತೆದಾರರಿಗೆ

# ಇ-ಗೈಡ್

ಪರಿವಿಡಿ


| | |
|---|---|
| ಮುನ್ನುಡಿ............................................................................................................ | 4 |
| ಬೇಸಿಕ್ಸ್ ನೊಂದಿಗೆ ಆರಂಭಿಸೋಣ.................................................................... | 5 |
| ಬಂಡವಾಳ ಮಾರುಕಟ್ಟೆ ಎಂದರೇನು?.................................................................. | 5 |
| ಸೆಕ್ಯುರಿಟೀಸ್ ಎಂದರೇನು? ........................................................................... | 6 |
| ಸೆಕ್ಯುರಿಟೀಸ್ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾರುಕಟ್ಟೆ ಎಂದರೇನು? .............................. | 6 |
| ಬಂಡವಾಳ ಮಾರುಕಟ್ಟೆಯಲ್ಲಿ ಸೆಬಿ(ಎಸ್.ಇ.ಬಿ.ಐ)ಯ ಪಾತ್ರ ಏನು? .................................. | 7 |
| ಬಂಡವಾಳ ಮಾರುಕಟ್ಟೆಯಲ್ಲಿ ಎನ್.ಎಸ್.ಡಿ.ಎಲ್. ಪಾತ್ರ ಏನು? ...................................... | 7 |
| ಡಿಮ್ಯಾಟ್ ಅನ್ನುಅರ್ಥಮಾಡಿಕೊಳ್ಳೋಣ ................................................................ | 9 |
| 'ಡಿಮ್ಯಾಟ್'ನ ಅರ್ಥವೇನು? ............................................................................ | 9 |
| ಡಿಪಾಸಿಟರಿ ಎಂದರೇನು? | 9 |
| ಡಿಪಾಸಿಟರಿ ಖಾತೆ ಎಂದರೇನು? ....................................................................... | 9 |
| ಡಿಪಾಸಿಟರಿ ಪಾರ್ಟಿಸಿಪೆಂಟ್ ಎಂದರೆ ಯಾರು? ..................................................... | 10 |
| ಡಿಮ್ಯಾಟ್ ಖಾತೆ ಹೊಂದುವ ಲಾಭಗಳು ಯಾವುದು? ............................................... | 10 |
| ಎನ್.ಎಸ್.ಡಿ.ಎಲ್. ಒದಗಿಸುವ ಸೇವೆಗಳು ................................................ | 12 |
| ಡಿಮ್ಯಾಟ್ ಖಾತೆ ತೆರೆಯುವುದು ......................................................................... | 12 |
| ಡಿಮ್ಯಾಟ್ ಖಾತೆಯ ಬೇಸಿಕ್ ಸೇವೆಗಳು ............................................................... | 19 |
| ಸೆಕ್ಯುರಿಟೀಸ್ಗಳ ಡಿಮೆಟಿರಿಯಲೈಸೇಶನ್ ............................................................ | 21 |
| ಸೆಕ್ಯುರಿಟೀಸ್ಗಳ ರಿಮೆಟಿರಿಯಲೈಸೇಶನ್ ............................................................. | 28 |
| ಮಾರುಕಟ್ಟೆ ವ್ಯಾಪಾರಗಳ ಸೆಟಲ್ಮೆಂಟ್ ಮತ್ತು ಸೆಕ್ಯುರಿಟೀಸ್ಗಳ ವರ್ಗಾವಣೆ ................................ | 29 |
| ಸೆಕ್ಯುರಿಟೀಸ್ಗಳ ವರ್ಗಾವಣೆ ........................................................................... | 36 |
| ನಾಮನಿರ್ದೇಶನ ........................................................................................ | 41 |
| ಸೆಕ್ಯುರಿಟೀಸ್ ಪ್ಲೆಡ್ಜ್ ಮತ್ತು ಹೈಪೋಥಿಕೇಶನ್ ........................................................... | 44 |
| ಸೆಕ್ಯುರಿಟೀಸ್ ಕೊಡುವುದು ಮತ್ತು ಸಾಲ ಪಡೆಯುವುದು ............................................ | 49 |
| ಡಿಮ್ಯಾಟ್ ಖಾತೆಗಳಿಗೆ ಪವರ್ ಆಫ್ ಅಟಾರ್ನಿ ಬಳಿಕೆ ................................................ | 51 |
| ಎನ್.ಎಸ್.ಡಿ.ಎಲ್. ಇಂದ ಇ-ಸೇವೆಗಳು ..................................................... | 54 |
| ಸ್ಪೀಡ್-ಇ ................................................................................................ | 54 |
| ಐ.ಡಿ.ಇ.ಎ.ಎಸ್ ........................................................................................ | 56 |
| ಎನ್.ಎಸ್.ಡಿ.ಎಲ್. ಮೊಬೈಲ್ ಅಪ್ .................................................. | 56 |
| ಇ- ಮತದಾನ ........................................................................................ | 56 |
| ಎನ್.ಎಸ್.ಡಿ.ಎಲ್. ಇಂದ ಇತರೆ ಉಪಯುಕ್ತ ಸೇವೆಗಳು ................................ | 57 |
| ಎನ್.ಎಸ್.ಡಿ.ಎಲ್. ಏಕೀಕೃತ ಖಾತೆಯ ಸ್ಟೇಟ್ಮೆಂಟ್ ................................................ | 57 |

| | |
|---|---|
| ಎಸ್.ಎಮ್.ಎಸ್. ಅಲರ್ಟ್ ಸೌಲಭ್ಯ ........................................................................ | 58 |
| ಡಿಮ್ಯಾಟ್ ಖಾತೆಯಲ್ಲಿ ಮ್ಯೂಚುವಲ್ ಫಂಡ್ ಯುನಿಟ್ಗಳನ್ನು ಇಡುವುದು .................. | 61 |
| ಡಿಮ್ಯಾಟ್ ಖಾತೆಯಲ್ಲಿ ಅಪ್ಡೇಟ್ / ಬದಲಾವಣೆ ............................................ | 64 |
| ಡಿಮ್ಯಾಟ್ ಖಾತೆಯಲ್ಲಿ ಕಾರ್ಪೊರೇಟ್ ಪ್ರಯೋಜನಗಳನ್ನು ಪಡೆಯುವುದು .............. | 68 |
| ಎನ್.ಎಸ್.ಡಿ.ಎಲ್. ಸೇವೆಗಳಿಗೆ ಶುಲ್ಕಗಳು ................................................ | 70 |
| ನಿಮ್ಮ ಡಿಮ್ಯಾಟ್ ಖಾತೆಯ ಆರೈಕೆ .......................................................... | 71 |
| ಹೆಚ್ಚು ಮಾಹಿತಿ .......................................................................................... | 76 |
| ಪಡೆಯದ ಡಿವಿಡೆಂಡ್ / ಷೇರುಗಳ ಮರುಪಾವತಿಗೆ ಕ್ಲೇಮ್ ............................................ | 76 |
| ಸೆಕ್ಯುರಿಟೀಸ್ಗಳ ವರ್ಗಾವಣೆಗಾಗಿ ಡಿಮ್ಯಾಟ್ ಕಡ್ಡಾಯ ........................................ | 78 |
| ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು ................................................ | 79 |
| ಹೂಡಿಕೆದಾರರಿಗೆ ಎನ್.ಎಸ್.ಡಿ.ಎಲ್. ಸುದ್ದಿಪತ್ರ .......................................... | 79 |
| ಕುಂದುಕೊರತೆ ಪರಿಹಾರ ........................................................................ | 80 |
| ಹೂಡಿಕೆದಾರ ಕೇಂದ್ರಿತ ಇತರೆ ಸೇವೆಗಳು .................................................... | 80 |
| ನ್ಯಾಷನಲ್ ಸ್ಕಿಲ್ಸ್ ರಿಜಿಸ್ಟ್ರಿ (ಎನ್.ಎಸ್.ಆರ್.) ........................................................ | 80 |
| ಕೆ.ವೈ.ಸಿ. ರಿಜಿಸ್ಟ್ರೇಷನ್ ಏಜನ್ಸಿ (ಕೆ.ಆರ್.ಎ) .......................................................... | 81 |
| ನ್ಯಾಷನಲ್ ಅಕಾಡೆಮಿಕ್ ಡಿಪೋಸಿಟರಿ (ಎನ್.ಎ.ಡಿ) .................................................. | 81 |
| ಎನ್.ಐ.ಆರ್. ಖಾತೆ (ಇ-ಇನ್ಶ್ಯೂರೆನ್ಸ್ ಖಾತೆ) ................................................................ | 81 |
| ಎನ್.ಎಸ್.ಡಿ.ಎಲ್. ಸಂಪರ್ಕಿಸಿ .............................................................. | 82 |
| ಉಪಯುಕ್ತ ಲಿಂಕ್ಗಳು ........................................................................ | 85 |
| ಬಳಸಿದ ಸಂಕೇತಾಕ್ಷರ ........................................................................................ | 86 |

## ಮುನ್ನುಡಿ

**ಪ್ರಿಯ ಓದುಗಾರ,**

ಎನ್.ಎಸ್.ಡಿ.ಎಲ್ ನಲ್ಲಿ ನಿಮ್ಮ ಆಸಕ್ತಿಗಾಗಿ ನಮ್ಮ'ಧನ್ಯವಾದಗಳು'.

ನವೆಂಬರ್ 1996 ರಲ್ಲಿ ಎನ್.ಎಸ್.ಡಿ.ಎಲ್ ತನ್ನ ಕಾರ್ಯಾಚರಣೆಗಳನ್ನು ಆರಂಭಿಸಿತು. ಅಲ್ಲಿಂದ,ಎನ್.ಎಸ್.ಡಿ.ಎಲ್ಡಿಪಾಸಿಟರಿ ಸಿಸ್ಟಮ್ನ ಬಳಕೆದಾರರ ಸಂಖ್ಯೆ ಏಕಪ್ರಕಾರದಲ್ಲಿಹೆಚ್ಚುತ್ತಿದೆ. ಎನ್.ಎಸ್.ಡಿ.ಎಲ್ ಡಿಪಾಸಿಟರಿ ಸಿಸ್ಟಮ್ ಅನ್ನು ಬಳಸಿಕೊಳ್ಳುವ ಸೌಲಭ್ಯಗಳು ಮತ್ತು ಪ್ರಯೋಜನಗಳ ಬಗ್ಗೆ ಮತ್ತು ಎನ್.ಎಸ್.ಡಿ.ಎಲ್ ಡಿಪಾಸಿಟರಿ ಸಿಸ್ಟಮ್ ಅನ್ನು ಬಳಸಿಕೊಳ್ಳುವ ಮುನ್ನೆಚ್ಚರಿಕೆಗಳ ಬಗ್ಗೆ ಪ್ರಸ್ತುತ ಮತ್ತು ನಿರೀಕ್ಷಿತ ಬಳಕೆದಾರರಿಗೆ ತಿಳಿದಿರುವುದು ನಮ್ಮ ಪ್ರಯತ್ನವಾಗಿದೆ .

ನಾವು,ಎನ್.ಎಸ್.ಡಿ.ಎಲ್ ಅಲ್ಲಿ ಪ್ರತಿ ಒಬ್ಬಭಾರತೀಯಕೇವಲ ಹೂಡಿಕೆದಾರರಲ್ಲದೆ'ಜಾಗರೂಕ ಹೂಡಿಕೆದಾರ'ರಾಗ ಬೇಕುಎಂದು ನಂಬುತ್ತೆವೆ.ಈ ಕಿರುಪುಸ್ತಕವನ್ನು ಓದುವ ನಿಮ್ಮ ನಿರ್ಧಾರವನ್ನು ನಾವು ಪ್ರಶಂಸಿಸುತ್ತೇವೆ. 'ಜಾಗರೂಕ ಹೂಡಿಕೆದಾರ'ನಾಗಲು ಈ ಕಿರುಪುಸ್ತಕದಲ್ಲಿ ನೀಡಲಾದ ಮಾಹಿತಿಯು ನಿಮಗೆ ಸಹಾಯ ಮಾಡುತ್ತದೆ.

ಎನ್.ಎಸ್.ಡಿ.ಎಲ್ ಗೆ ಸಣ್ಣ ಪರಿಚಯವನ್ನು ಹೊರುತುಪಡಿಸಿ, ಒಮ್ಮೆ ನೀವು ಎನ್.ಎಸ್.ಡಿ.ಎಲ್ ನಲ್ಲಿ ಡಿಮ್ಯಾಟ್ ಖಾತೆಯನ್ನು ತೆರೆದರೆ ಹಲವಾರು ಸೇವೆಗಳ ಉಪಯೋಗ ಹೇಗೆ ಪಡೆಯಬಹುದು ಎಂಬುವುದರ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದ್ದೇವೆ. ಒಂದು ವೇಳೆ, ನಿಮಗೆ ಹೆಚ್ಚಿನ ಮಾಹಿತಿ ಅಥವಾ ಯಾವುದೇ ಸ್ಪಷ್ಟೀಕರಣ ಬೇಕು ಎಂದರೆ, ದಯವಿಟ್ಟು ನಮ್ಮನ್ನು ನಿರಾತಂಕವಾಗಿ ಸಂಪರ್ಕಿಸಿ. ಇದನ್ನು ಉತ್ತಮಗೊಳಿಸಲು ನಿಮ್ಮ ಸಲಹೆಗಳು ಮತ್ತು ಪ್ರತಿಕ್ರಿಯೆಗಳಿಗೆ ನಾವು ಎದುರುನೋಡುತ್ತಿದ್ದೇವೆ.

**ಅಭಿನಂದನೆಗಳು,**
**ಎನ್.ಎಸ್.ಡಿ.ಎಲ್ ತಂಡ**

## ಬೇಸಿಕ್ಸ್ ನೊಂದಿಗೆಆರಂಭಿಸೋಣ

### ಬಂಡವಾಳ ಮಾರುಕಟ್ಟೆ ಎಂದರೇನು?

ಸುಲಭ ರೀತಿಯಲ್ಲಿ ಹೇಳುವುದಾದರೆ ಬಂಡವಾಳ ಅಥವಾ ಹಣದ ಮಾರುಕಟ್ಟೆಯನ್ನು ಬಂಡವಾಳ ಮಾರುಕಟ್ಟೆ ಎನ್ನುತ್ತಾರೆ, ಅದರಲ್ಲಿ ವ್ಯವಹಾರ ಉದ್ದೇಶಗಳಿಗಾಗಿ ಹಣದ ಅಗತ್ಯವಿರುವವರು ಅವರಿಗೆ ನೀಡಲು ಸಿದ್ಧರಿರುವವರನ್ನು ಹುಡುಕುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ಮಾರ್ಕೆಟ್ಟಲ್ಲಿ ಜನರು ವಿವಿಧ ರೀತಿಯ ಹಣಕಾಸು ಸಲಕರಣೆಗಳ ಖರೀದಿ ಮತ್ತು ಮಾರಾಟದಲ್ಲಿ ತೊಡಗಿಸಿಕೊಳ್ಳುವ ಮಾರುಕಟ್ಟೆಯನ್ನು ಬಂಡವಾಳ ಮಾರುಕಟ್ಟೆ ಎಂದು ಕರೆಯಲಾಗಿದೆ. ಇದು ರೆಗ್ಯುಲೇಟರ್ (ಎಸ್.ಇ.ಬಿ.ಐ), ವಿನಿಮಯ ಕಚೇರಿಗಳು (ಎನ್‌ಎಸ್‌ಇ / ಬಿಎಸ್‌ಇ ಇತ್ಯಾದಿ), ಡಿಪಾಸಿಟರಿಗಳು (ಎನ್.ಎಸ್.ಡಿ.ಎಲ್ / ಸಿ.ಡಿ.ಎಸ್.ಎಲ್) ಮತ್ತು ಸ್ಟಾಕ್ಬ್ರೋಕರ್, ಡಿಪಿಗಳು, ಕಸ್ಟೊಡಿಯನ್ಸ್, ಆರ್ಟಿಎಗಳು, ಮರ್ಚೆಂಟ್ ಬ್ಯಾಂಕರ್ಗಳು ಮುಂತಾದ ಇತರ ಮಧ್ಯವರ್ತಿಗಳನ್ನು ಒಳಗೊಂಡಿದೆ. ಇಂಡಿಯನ್ ಕ್ಯಾಪಿಟಲ್ ಮಾರ್ಕೆಟ್ನ ಬ್ರಾಡ್ ಸ್ಟ್ರಕ್ಚರ್ ಚಿತ್ರ ಸಂಖ್ಯೆ ರಲ್ಲಿ ನೀಡಲಾಗಿದೆ.




**1 ಚಿತ್ರ**

## ಸೆಕ್ಯುರಿಟೀಸ್ ಎಂದರೇನು?

ಸೆಕ್ಯುರಿಟೀಸ್ ವಿವಿಧ ರೀತಿಯ ಹಣಕಾಸು ಸಾಧನಗಳಾಗಿವೆ, ಇವುಗಳು ಬಂಡವಾಳ ಮಾರುಕಟ್ಟೆಗಳಲ್ಲಿ ವ್ಯಾಪಾರಗೊಳ್ಳುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಿಧಿಯನ್ನು ಹುಡುಕುವವರಿಗೆ ನಿಧಿ ಪೂರೈಕೆದಾರರಿಂದ ಹಣವನ್ನು ನೀಡಲಾಗುವ ಉಪಕರಣಗಳು ಇವು. ಇದನ್ನು ಅರ್ಥಮಾಡಿಕೊಳ್ಳಲು ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಎಬಿಸಿ ಲಿಮಿಟೆಡ್ ಕಂಪನಿಯ ಪ್ರಸಿದ್ಧ ಉದ್ಯಮಿ ಮತ್ತು ವ್ಯವಸ್ಥಾಪಕ ನಿರ್ದೇಶಕ 'ಎ'. ಎಬಿಸಿ ಲಿಮಿಟೆಡ್ ಹೆಸರಿನಲ್ಲಿ ಹೊಸ ಸಿಮೆಂಟ್ ಪ್ಲಾಂಟ್‌ಅನ್ನುಪ್ರಾರಂಭಿಸಲು ಬಯಸುತ್ತಾರೆ. ಇದಕ್ಕೆ ಅಗತ್ಯವಿರುವಬೃಹತ್ ಪ್ರಮಾಣದ ಹಣವನ್ನು (ಬಂಡವಾಳ)ಅವರು ಸ್ವತಃ ಅಥವಾ ಎಬಿಸಿ ಲಿಮಿಟೆಡ್ಗೆ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಹಣದ ಪ್ರತಿಫಲವಾಗಿ ಅದರ ಇಕ್ವಿಟಿ ಷೇರುಗಳನ್ನು ನೀಡುವ ಮೂಲಕ ಬಂಡವಾಳ ಮಾರುಕಟ್ಟೆಗೆ ಪ್ರವೇಶಿಸಲು ನಿರ್ಧರಿಸುತ್ತದೆ. ಇದು ಇನಿಶಿಯಲ್ ಪಬ್ಲಿಕ್ ಆಫರ್ ಅಥವಾ ಐಪಿಒಯಿಂದ ಹೊರಬರುತ್ತದೆ (ಇದು ಮೊದಲನೆಯ ಬಾರಿ ಎಬಿಸಿ ಲಿಮಿಟೆಡ್ ಸಾರ್ವಜನಿಕವಾಗಿ ಬೃಹತ್ ಪ್ರಮಾಣದ ಹಣವನ್ನು ಕೇಳುತ್ತಿರುವುದು). ಸಮ್ಮತಿಯಾದ ಬೆಲೆಯನ್ನು ಪಾವತಿಸುವ ಮೂಲಕ ಸಾರ್ವಜನಿಕರು ಷೇರುಗಳಿಗೆ ಅಪ್ಲೈ ಮಾಡುತ್ತಾರೆ. ಎಲ್ಲ ಪ್ರಕ್ರಿಯೆಗಳು ಮುಗಿದ ನಂತರ, ಕಂಪೆನಿಯು ತನ್ನ ಬ್ಯಾಂಕ್ ಖಾತೆಯಲ್ಲಿ ಹಣವನ್ನು ಪಡೆದ ನಂತರ ಅರ್ಜಿದಾರರಿಗೆ ಷೇರುಗಳನ್ನು ನೀಡುತ್ತದೆ, ಇದರಿಂದ ಅವರನ್ನು ಕಂಪನಿಯ ಷೇರುದಾರರಾಗಿ ಮಾಡಲಾಗುತ್ತದೆ.

ಮೇಲೆ ವಿವರಿಸಿದ ಷೇರು ಒಂದು ರೀತಿಯ ಸೆಕ್ಯೂರಿಟಿಯಾಗಿದೆ. ಇತರ ಉದಾಹರಣೆಗಳು - ಡಿಬೆಂಚರ್‌ಗಳು, ಬಾಂಡ್ಗಳು, ಮ್ಯೂಚುವಲ್ ಫಂಡ್ ಯೂನಿಟ್ಗಳು, ವಾಣಿಜ್ಯ ಪೇಪರ್ಸ್, ಸರ್ಟಿಫಿಕೇಟ್ ಆಫ್ ಡೆಪಾಸಿಟ್, ಸರ್ಕಾರಿ ಸೆಕ್ಯುರಿಟೀಸ್ ಇತ್ಯಾದಿ.

## ಸೆಕ್ಯುರಿಟೀಸ್ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾರುಕಟ್ಟೆ ಎಂದರೇನು?

ವಿತರಕರಿಂದ ಸಾರ್ವಜನಿಕರಿಗೆ ಷೇರುಗಳು ಅಥವಾ ಸೆಕ್ಯುರಿಟಿ ವಿತರಣೆಗೆ 'ಪ್ರಾಥಮಿಕ ಮಾರುಕಟ್ಟೆ' ಎಂದು ಕರೆಯಲಾಗುತ್ತದೆ. ಈಗಾಗಲೇ ವಿತರಿಸಿದ ಸೆಕ್ಯೂರಿಟಿಗಳವಹಿವಾಟಿ(ಖರೀದಿ ಮತ್ತು ಮಾರಾಟ) ಮಾಡುವಮಾರುಕಟ್ಟೆ ಸ್ಥಳವಾದ ವಿನಿಮಯ ಮಾರುಕಟ್ಟೆಯನ್ನು 'ಮಾಧ್ಯಮಿಕ ಮಾರುಕಟ್ಟೆ' ಎಂದು ಕರೆಯಲಾಗುತ್ತದೆ. ಯಾವುದೇ ಷೇರುದಾರನು ತನ್ನ ಷೇರುಗಳನ್ನು ಬಿಎಸ್ಇ ಅಥವಾ ಎನ್ಎಸ್ಇ ನಂತಹ ಷೇರು ವಿನಿಮಯ ಕೇಂದ್ರಗಳು ಒದಗಿಸಿದ ವೇದಿಕೆಯ ಮೇಲೆ ಎಸ್.ಇ.ಬಿ.ಐ.ನೋಂದಾಯಿತ ಷೇರುದಾರನ ಮೂಲಕ ಮಾರಾಟ ಮಾಡಲು ನೀಡಬಹುದು.

ಯಾವುದೇ ವ್ಯಕ್ತಿಯು ಈ ಷೇರುಗಳನ್ನು ಅವನ / ಅವಳ **ಸ್ಟಾಕ್ಬ್ರೋಕರ್** ಮೂಲಕ ಒಪ್ಪಿಗೆಯಾದ ಬೆಲೆಯನ್ನು ಪಾವತಿಸುವ ಮೂಲಕ ಖರೀದಿಸಬಹುದು.

## ಬಂಡವಾಳ ಮಾರುಕಟ್ಟೆಯಲ್ಲಿ ಸೆಬಿ(ಎಸ್.ಇ.ಬಿ.ಐ)ಯ ಪಾತ್ರ ಏನು?

ಸೆಬಿ ಅಥವಾ ಭಾರತೀಯ ಭದ್ರತೆ ಮತ್ತು ವಿನಿಮಯ ಬೋರ್ಡ್,ಭಾರತದಲ್ಲಿ ಬಂಡವಾಳ ಮಾರುಕಟ್ಟೆಗಳ ನಿಯಂತ್ರಕವಾಗಿದೆ. ಇದು 1988 ರಲ್ಲಿ ಶಾಸನಬದ್ಧವಲ್ಲದ ದೇಹವಾಗಿ ರೂಪುಗೊಂಡಿತು. ನಂತರ 1992 ರಲ್ಲಿ, ಭಾರತೀಯ ಭದ್ರತೆ ಮತ್ತು ವಿನಿಮಯ ಬೋರ್ಡ್ ಕಾಯಿದೆ, 1992 ರ ನಂತರ, ಇದು ಭದ್ರತಾ ಪತ್ರಗಳಲ್ಲಿ ಹೂಡಿಕೆದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಭದ್ರತಾ ಮಾರುಕಟ್ಟೆಯನ್ನು ನಿಯಂತ್ರಿಸುವ ಶಾಸನಬದ್ಧ ಅಧಿಕಾರಗಳೊಂದಿಗೆ ಸ್ವಾಯತ್ತ ದೇಹವಾಯಿತು. ಬಂಡವಾಳ ಮಾರುಕಟ್ಟೆಯಲ್ಲಿ ವಿವಿಧ ಮಾರುಕಟ್ಟೆಯ

ಮಧ್ಯವರ್ತಿಗಳನ್ನುನೋಂದಾಯಿಸಲು SEBI ವಿಶಾಲವಾದ ಅಧಿಕಾರವನ್ನು ಹೊಂದಿದೆ, ನಿರಂತರ ಎಚ್ಚರಿಕೆಯ ಮೂಲಕ ಎಲ್ಲಾ ಮಾರುಕಟ್ಟೆ ಮಧ್ಯವರ್ತಿಗಳನ್ನು ನಿಯಂತ್ರಿಸುತ್ತದೆ ಮತ್ತು ಅದರ ನಿಯಮಗಳ ಉಲ್ಲಂಘನೆ ಮಾಡಿದರೆ ಯಾವುದೇ ಮಾರುಕಟ್ಟೆ ಮಧ್ಯವರ್ತಿಗೆದಂಡ ವಿಧಿಸಬಹುದು.

## ಬಂಡವಾಳ ಮಾರುಕಟ್ಟೆಯಲ್ಲಿ ಎನ್.ಎಸ್.ಡಿ.ಎಲ್. ಪಾತ್ರ ಏನು?

ಎನ್.ಎಸ್.ಡಿ.ಎಲ್. 1996 ರಲ್ಲಿ ಸ್ಥಾಪನೆಕೊಂಡಿದೆ. ಇದು ಇಂದು ವಿಶ್ವದ ಅತಿ ದೊಡ್ಡ **ಡಿಪೋಸಿಟೋರಿಸ್ಗಳಲ್ಲೊಂದು** ಆಗಿದೆ. **ಇದು** ಒಂದು ಡಿಪಾಸಿಟರಿ ಆದ್ದುದರಿಂದ ಷೇರುಗಳು ಮತ್ತು ಇತರ ರೀತಿಯ ಸೆಕ್ಯೂರಿಟಿಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಅಂದರೆ ಡಿಮೆಟಿರಿಯಲೈಸ್ ರೂಪದಲ್ಲಿ ಹಿಡಿದಿಡಲು ಅಧಿಕಾರ ಹೊಂದಿದೆ. ಡಿಮ್ಯಾಟ್ ಖಾತೆ ಇರುವದರಿಂದ ಎಲೆಕ್ಟ್ರಾನಿಕ್ ರೂಪದಲ್ಲಿ ಸೆಕ್ಯೂರಿಟಿಯನ್ನು ಹೊಂದಬಹುದು ಹಾಗೂ ಯಾವುದೇ ಬೇರೆಯವರ ಡಿಮ್ಯಾಟ್ ಖಾತೆಗೆ ಅವನ /ಅವಳ ಡಿಮ್ಯಾಟ್ ಖಾತೆಯಿಂದ ಯಾವುದೇ ಸೆಕ್ಯೂರಿಟಿಯನ್ನು ವರ್ಗಾಯಿಸಬಹುದು. ಚಿತ್ರ ಸಂಖ್ಯೆ 2 ರಲ್ಲಿ ಬಂಡವಾಳ ಮಾರುಕಟ್ಟೆಗಳಲ್ಲಿ ಡಿಪಾಸಿಟರಿ ಮತ್ತು ಇತರ ಮಧ್ಯಸ್ಥಗಾರರ ನಡುವಿನ ಸಂಬಂಧವನ್ನು ತೋರಿಸಲಾಗಿದೆ.




**ಚಿತ್ರ 2**

ಭಾರತೀಯ ಬಂಡವಾಳ ಮಾರುಕಟ್ಟೆಗೆ ಎನ್.ಎಸ್.ಡಿ.ಎಲ್ ನೀಡಿರುವ ಕೊಡುಗೆ ಅಪಾರ. ಅದರಿಂದ ಇದು ವಿಶ್ವದಲ್ಲಿ ಅನೇಕರ ಮುಂದೆ ಪ್ರಮುಖ ಬಂಡವಾಳ ಮಾರುಕಟ್ಟೆಗಳಲ್ಲಿ ಒಂದಾಗಿದೆ. ವಿವಿಧ ಉತ್ಪನ್ನಗಳು ಮತ್ತು ಸೇವೆಗಳಿಗೆ ಅತ್ಯಂತ ಹೊಸ ತಂತ್ರಗಳನ್ನು ಉಪಯೋಗಿಸುವ ಮೂಲಕ ಮತ್ತು ದೇಶದಲ್ಲಿ ಸಾಟಿಯಿಲ್ಲದ ವ್ಯಾಪಿಸಿ, ಎನ್.ಎಸ್.ಡಿ.ಎಲ್. ಹೂಡಿಕೆದಾರರು ಮತ್ತು ಇತರ ಮಧ್ಯವರ್ತಿಗಳ ವಿಶ್ವಾಸವನ್ನು ಗಳಿಸಿದೆ, ಹೀಗೆ ಅದರ ಟ್ಯಾಗ್ ಲೈನ್ - **ತಂತ್ರಜ್ಞಾನ, ಟ್ರಸ್ಟ್ & ರೀಚ್** ಅನ್ನು ಉಳಿಸಿಕೊಂಡಿದೆ.

ಎನ್.ಎಸ್.ಡಿ.ಎಲ್ ಹೂಡಿಕೆದಾರರು, ಸ್ಟಾಕ್ ಬ್ರೋಕರ್ಗಳು, ಸ್ಟಾಕ್ ಎಕ್ಸ್ಚೇಂಜ್ಗಳು, ಪಾಲಕರುಗಳಿಗೆ 275 ಡಿಪಿಎಸ್ (ಡಿಪಾಸಿಟರಿ ಪಾರ್ಟಿಸಿಪೆಂಟ್ಸ್)ನ ನೆಟ್ವರ್ಕ್ ಮೂಲಕ ಸೇವೆಗಳ ಪುಷ್ಪಗುಚ್ಛವನ್ನು ಒದಗಿಸುತ್ತದೆ. ಅನೇಕ ದೊಡ್ಡ ಬ್ಯಾಂಕುಗಳು (ರಾಷ್ಟ್ರೀಕೃತ, ಖಾಸಗಿ ಮತ್ತು ಸಹಕಾರಿ), ಸ್ಟಾಕ್ ಬ್ರೋಕರ್ಗಳು ಮತ್ತು ಹಣಕಾಸು ಸಂಸ್ಥೆಗಳು ಎನ್ಎಸ್ಡಿಎಲ್ ಅನ್ನು ಡಿಪಿಗಳಂತೆ ಸೇರಿಕೊಂಡಿದೆ. ಎನ್.ಎಸ್.ಡಿ.ಎಲ್ ಡಿಪಿಗಳು ದೇಶದಾದ್ಯಂತ 30,700 ಕ್ಕೂ ಹೆಚ್ಚಿನ ಸೇವಾ ಕೇಂದ್ರಗಳಿಂದ ಮತ್ತು ವಿದೇಶಗಳಲ್ಲಿ ಕೆಲವನ್ನು ಕಾರ್ಯ ನಿರ್ವಹಿಸುತ್ತವೆ. ಎನ್.ಎಸ್.ಡಿ.ಎಲ್ ಡಿಪಿಗಳು ಮತ್ತು ಅವುಗಳ ಸೇವಾ ಕೇಂದ್ರಗಳ ಪಟ್ಟಿhttps://nsdl.co.in/dpsch.php ನಲ್ಲಿ ಲಭ್ಯವಿದೆ .

## ಡಿಮ್ಯಾಟ್ ಅನ್ನುಅರ್ಥಮಾಡಿಕೊಳ್ಳೋಣ

### ' ಡಿಮ್ಯಾಟ್'ನ ಅರ್ಥವೇನು ?

ಡಿಮ್ಯಾಟ್ ಸೆಕ್ಯೂರಿಟಿಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಹಿಡಿದಿಡುವ ಅಥವಾ ಇಟ್ಟುಕೊಳ್ಳುವ ಒಂದು ರೂಪವಾಗಿದೆ. ಸೆಕ್ಯುರಿಟಿಗಳನ್ನು ಕಾಗದ ರೂಪದಲ್ಲಿ ಹಿಡಿದಿಡಲು ಕಾನೂನುಬದ್ಧವಾದ ಪರ್ಯಾಯ ಇದಾಗಿದೆ.

### ಒಂದು ಡಿಪಾಸಿಟರಿ ಎಂದರೇನು?

ಒಂದು ಡಿಪಾಸಿಟರಿಯು ಷೇರುಗಳ ಬ್ಯಾಂಕ್ ಆಗಿದೆ. ನಾವು ಹಣವನ್ನು ಉಳಿತಾಯ ಖಾತೆಯಾಗಿ ಬ್ಯಾಂಕಿನಲ್ಲಿ ಇಡುವ ಹಾಗೆ ನಾವು ನಮ್ಮ ಹೂಡಿಕೆಗಳನ್ನು ಷೇರುಗಳಲ್ಲಿ ಡಿಮ್ಯಾಟ್ ಖಾತೆಯಲ್ಲಿ ಡಿಪಾಸಿಟರಿನಲ್ಲಿ ಇರಿಸಿಕೊಳ್ಳಬಹುದು. ನಮ್ಮ ಖಾತೆಯಿಂದ ಇತರ ವ್ಯಕ್ತಿಗಳ ಖಾತೆಗೆ ಹಣ ವರ್ಗಾವಣೆ ಮಾಡಲು ಬ್ಯಾಂಕ್ ನಮಗೆ ಸಹಾಯ ಮಾಡುವ ಹಾಗೆ, ಡಿಪಾಸಿಟರಿ ಷೇರುಗಳನ್ನು ಒಂದು ಡಿಮ್ಯಾಟ್ ಖಾತೆಯಿಂದ ಮತ್ತೊಂದಕ್ಕೆ ವರ್ಗಾಯಿಸಲು ನಮಗೆ ಸಹಾಯ ಮಾಡುತ್ತದೆ. ಬ್ಯಾಂಕ್ ತನ್ನ ಸೇವೆಗಳನ್ನು ಅದರ ಶಾಖೆಗಳ ಮೂಲಕ ಗ್ರಾಹಕರಿಗೆ ನೀಡುತ್ತದೆ, ಡಿಪಾಸಿಟರಿ ಅದರ ಸೇವೆಗಳ ವಿಸ್ತಾರವನ್ನು ತನ್ನ (ಡಿಪಾಸಿಟರಿ) ಪಾರ್ಟಿಸಿಪೆಂಟ್ ಎಂದು ಕರೆಯಲಾಗುವ ಏಜೆಂಟ್ ನೆಟ್ವರ್ಕ್ ಮೂಲಕ ವಿಸ್ತರಿಸುತ್ತದೆ. ಇದಲ್ಲದೆ, ಬಂಡವಾಳ ಮಾರುಕಟ್ಟೆಗಳಲ್ಲಿ ವಿವಿಧ ಪಾಲುದಾರರಿಗೆ ಡಿಪಾಸಿಟರಿ ಇತರ ಸೇವೆಗಳನ್ನು ಒದಗಿಸುತ್ತದೆ.

### ಡಿಪಾಸಿಟರಿ ಖಾತೆ ಎಂದರೇನು?

ಡಿಪಾಸಿಟರಿ ಖಾತೆಯು ಒಂದು ಬ್ಯಾಂಕ್ ಖಾತೆಯಂತೆ, ಡಿಪಾಸಿಟರಿಯೊಂದಿಗೆ ಇರಿಸಲಾಗುತ್ತದೆ. ಬ್ಯಾಂಕ್ ಖಾತೆಯು ಹಣವನ್ನು ಇರಿಸಿಕೊಳ್ಳಲು ಮತ್ತು ವರ್ಗಾವಣೆ ಮಾಡಲು ಬಳಸಲಾಗುತ್ತದೆ, ಡಿಪಾಸಿಟರಿ ಖಾತೆಯು ಸೆಕ್ಯೂರಿಟಿಗಳನ್ನು ಇರಿಸಿಕೊಳ್ಳಲು ಮತ್ತು ವರ್ಗಾವಣೆ ಮಾಡಲು ಬಳಸಲಾಗುತ್ತದೆ. ಡಿಪಾಸಿಟರಿ ಖಾತೆಯನ್ನು ಡಿಮ್ಯಾಟ್ ಖಾತೆ ಎಂದು ಕರೆಯಲಾಗುತ್ತದೆ.

ಡಿಪಾಸಿಟರಿ ಪಾರ್ಟಿಸಿಪೆಂಟ್ ಎಂದರೆ ಯಾರು?

ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ (ಡಿಪಿ) ಎಂದು ಕರೆಯಲಾದ ಏಜೆಂಟ್ಗಳ ಮೂಲಕ ಡಿಪೋಸಿಟರಿಯು ಅದರ ಹೂಡಿಕೆದಾರರಿಗೆ ಸೇವೆಗಳನ್ನು ಒದಗಿಸುತ್ತದೆ. ಸೆಬಿಯೊಂದಿಗೆ ನೋಂದಣಿಯಾದ ನಂತರ ಈ ಏಜೆಂಟನ್ನು ಎನ್.ಎಸ್.ಡಿ.ಎಲ್ ಅವರು ನೇಮಕ ಮಾಡುತ್ತಾರೆ. ಹೂಡಿಕೆದಾರರು ಡಿಪಾಸಿಟರಿ ನೀಡುವ ಸೇವೆಗಳನ್ನು ಪಡೆಯಲು ಬಯಸಿದರೆ, ಅವನು / ಅವಳು ಯಾವುದೇ ಡಿಪಿಯೊಂದಿಗೆ ಡಿಮ್ಯಾಟ್ ಖಾತೆಯನ್ನು ತೆರೆಯುವ ಅಗತ್ಯವಿದೆ. ಇದು ಬ್ಯಾಂಕಿನ ಸೇವೆಗಳನ್ನು ಬಳಸಿಕೊಳ್ಳಲು ಬ್ಯಾಂಕಿನ ಯಾವುದೇ ಶಾಖೆಯೊಂದಿಗೆ ಉಳಿತಾಯ ಖಾತೆ ತೆರೆಯುವುದಕ್ಕೆ ಸಮಾನ. https://nsdl.co.in/dpsch.php ನಲ್ಲಿ ನೀವು ಡಿಪಿಗಳ ಪಟ್ಟಿಯನ್ನು ಪಡೆಯಬಹುದು.

ಡಿಮ್ಯಾಟ್ ಖಾತೆ ಹೊಂದುವ ಲಾಭಗಳು ಯಾವುದು?

ಡಿಮ್ಯಾಟ್ ಖಾತೆ ಹೊಂದಿರುವ ಲಾಭಗಳು ಹೀಗಿವೆ :

ಎ. ಸೆಕ್ಯುರಿಟೀಸ್ಗಳ ತಕ್ಷಣ ವರ್ಗಾವಣೆ.

ಬಿ. ಸೆಕ್ಯುರಿಟೀಸ್ ವರ್ಗಾವಣೆಯಲ್ಲಿ ಯಾವುದೇ ಸ್ಟ್ಯಾಂಪ್ ಶುಲ್ಕಗಳು ಇಲ್ಲ.[1]

ಸಿ. ಕೆಟ್ಟ ವಿತರಣೆ, ನಕಲಿ ಸೆಕ್ಯುರಿಟೀಸ್, ಇತ್ಯಾದಿ ಭೌತಿಕ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಅಪಾಯಗಳಿಂದ ನಿವಾರಣೆ.

ಡಿ. ಸೆಕ್ಯುರಿಟೀಸ್ ವರ್ಗಾವಣೆಯಲ್ಲಿ ಒಳಗೊಂಡ ಕಾಗದದ ಕೆಲಸ ಕಡಿಮೆವಾಗುತ್ತದೆ.

ಇ. ವ್ಯವಹಾರ ವೆಚ್ಚದಲ್ಲಿ ಕಡಿತ.

ಎಫ್. ವಿಳಾಸ / ಬ್ಯಾಂಕ್ ಖಾತೆಯ ವಿವರಗಳು ಇತ್ಯಾದಿಗಳಲ್ಲಿ ಬದಲಾವಣೆಯು ಸುಲಭವಾಗಿದ್ದು, ಡಿಮ್ಯಾಟ್ ಖಾತೆಯಲ್ಲಿ ಮಾಡಲಾದ ಅಪ್ಡೇಟ್ ಸಂಬಂಧಿಸಿದ ಪ್ರತಿಯೊಂದು ಕಂಪೆನಿಗೆ ತಿಳಿಸಲಾಗುತ್ತದೆ. ಇದರಿಂದ ಪ್ರತ್ಯೇಕವಾಗಿ ಪ್ರತಿಯೊಬ್ಬರಿಗೂ ತಿಳಿಸುವ ಅಗತ್ಯವನ್ನು ನಿವಾರಿಸುತ್ತದೆ.

[1]ಹಣಕಾಸು ವರ್ಷ 2019 - 20 ಕ್ಕೆ ಪ್ರಸ್ತಾವಿತ ಹಣಕಾಸು ಬಿಲ್ನಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಜಿ. ಸಂಪೂರ್ಣ ಪ್ರಕ್ರಿಯೆಯು ಡಿಪಿಯು ಮಾಡುವದರಿಂದ ಸೆಕ್ಯೂರಿಟಿಗಳ ಪ್ರಸರಣವು ಸುಲಭವಾಗಿದ್ದು ಕಂಪೆನಿಗಳೊಂದಿಗೆ ವ್ಯವಹಾರವನ್ನು ನಿವಾರಣೆ ಮಾಡಿದೆ.

ಎಚ್. ಫೋಲಿಯೊಗಳು / ಖಾತೆಗಳ ಬಲವರ್ಧನೆಯ ಅನುಕೂಲಕರ ವಿಧಾನ.

ಐ. ವಿವಿಧ ರೀತಿಯ ಸೆಕ್ಯೂರಿಟಿಗಳಾದ ಇಕ್ವಿಟಿ, ಡಿಬೆಂಚರ್ಗಳು, ಬಾಂಡ್ಗಳು, ಸರ್ಕಾರಿ ಸೆಕ್ಯುರಿಟೀಸ್, ಸಾವರಿನ್ ಗೋಲ್ಡ್ ಬಾಂಡ್ಗಳು, ಮ್ಯೂಚುಯಲ್ ಫಂಡ್ ಯೂನಿಟ್ಗಳು ಮುಂತಾವು ಒಂದೇ ಖಾತೆಯಲ್ಲಿ ಹಿಡಿದಿಟ್ಟುಕೊಳ್ಳುವುದು.

ಜೆ. ಷೇರುಗಳ, ಮ್ಯೂಚುಯಲ್ ಫಂಡ್ ಯೂನಿಟ್ಗಳು ಇತ್ಯಾದಿ ವಿಭಜನೆ / ಬಲವರ್ಧನೆ / ವಿಲೀನತೆಯಿಂದ ಉದ್ಭವವಾಗುವ ಡಿಮ್ಯಾಟ್ ಖಾತೆಗೆ ಸ್ವಯಂಚಾಲಿತ ಕ್ರೆಡಿಟ್ ಆಗುತ್ತದೆ.

**ಎನ್.ಎಸ್.ಡಿ.ಎಲ್. ಒದಗಿಸುವ ಸೇವೆಗಳು**

ಡಿಪಾಸಿಟರಿ ಆಗಿ, ಎನ್.ಎಸ್.ಡಿ.ಎಲ್ ಹೂಡಿಕೆದಾರರಿಗೆ, ಇಶ್ಯೂರ್ ಕಂಪನಿಗಳು, ಷೇರುದಾರರು ಮತ್ತು ಕ್ಲಿಯರಿಂಗ್ ಕಾರ್ಪೊರೇಷನ್ಸ್ ವಿವಿಧ ಸೇವೆಗಳನ್ನು ಒದಗಿಸುತ್ತದೆ. ಯಾವುದೇ ಸೇವೆಯನ್ನು ಪಡೆಯಲು ಹೂಡಿಕೆದಾರರು ಯಾವುದೇ ಡಿಪಾಸಿಟರಿ ಪಾರ್ಟಿಸಿಪೆಂಟ್ ಅನ್ನು ಸಂಪರ್ಕಿಸಬಹುದು.

ಡಿಮ್ಯಾಟ್ ಖಾತೆ ತೆರೆಯುವುದು

1. ಎನ್.ಎಸ್.ಡಿ.ಎಲ್ ಡಿಮ್ಯಾಟ್ ಖಾತೆಯನ್ನು ಹೇಗೆ ತೆರೆಯುವುದು?

ಡಿಮ್ಯಾಟ್ ಖಾತೆಯನ್ನು ತೆರೆಯುವುದು ತುಂಬಾ ಸುಲಭವಾಗಿದೆ. ನೀವು ಮಾಡಬೇಕಾಗಿರುವುದು ಇಷ್ಟೆ, ಎನ್.ಎಸ್.ಡಿ.ಎಲ್ ಡಿಪಿಯನ್ನು ಸಂಪರ್ಕಿಸುವುದು, ಇದು ನಿಮಗೆ ಫಾರ್ಮಾಲಿಟಿಗಳನ್ನು ಪೂರ್ಣಗೊಳಿಸಲು ಸಹಾಯ ಮಾಡುತ್ತದೆ. ನೀವು ಫಾರಂ ಅನ್ನು ಭರ್ತಿ ಮಾಡಬೇಕು, ಪ್ಯಾನ್ ಕಾರ್ಡ್ ಮತ್ತು ವಿಳಾಸದ ಪುರಾವೆಗಳನ್ನು ಸಲ್ಲಿಸಬೇಕು. ಹೆಚ್ಚುವರಿಯಾಗಿ, ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಬೇಕು.

ನಿಮ್ಮ ಡಿಮ್ಯಾಟ್ ಖಾತೆ ತೆರೆದ ನಂತರ, ನಿಮ್ಮ ಡಿಪಿ ನಿಮಗೆ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ, ನಿಮ್ಮ ಡಿಮ್ಯಾಟ್ ಖಾತೆ ಸಂಬಂಧಿತ ವಿವರಗಳನ್ನು ಹೊಂದಿರುವ ಕ್ಲೈಂಟ್ ಮಾಸ್ಟರ್ ರಿಪೋರ್ಟ್ನ ಕಾಪಿ, ಬೆಲೆ ಪಟ್ಟಿ ಮತ್ತು 'ಲಾಭದಾಯಕ ಮಾಲೀಕ ಮತ್ತು ಡಿಪಾಸಿಟರಿ ಪಾರ್ಟಿಸಿಪೆಂಟ್ ಹಕ್ಕುಗಳು' ಒದಗಿಸುತ್ತದೆ. ಎಲ್ಲಾ ಡಿಪಿಗಳಿಗೆ ಅವುಗಳನ್ನು ಗುರುತಿಸಲು ಎನ್.ಎಸ್.ಡಿ.ಎಲ್ ಅವರಿಂದ ಹಂಚಿಕೆವಾಗಿರುತ್ತದೆ, ಡಿಪಿ ಐಡಿ 8 ಅಕ್ಷರಗಳ ಕೋಡ್ ಆಗಿದೆ, (ಉದಾಹರಣೆಗೆ IN3XXXXX). ಕ್ಲೈಂಟ್ ಐಡಿ ಎಂಬುದು ಸಿಸ್ಟಮ್ನಲ್ಲಿ ಗ್ರಾಹಕರನ್ನು ಗುರುತಿಸಲು ಬಳಸಲಾಗುವ 8 ಅಂಕಿಯ ಕೋಡ್. ಎನ್.ಎಸ್.ಡಿ.ಎಲ್ ಸಿಸ್ಟಮ್ನಲ್ಲಿ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಸಂಯೋಜನೆ ನಿಮ್ಮ ಯುನಿಕ್ ಖಾತೆ ಸಂಖ್ಯೆಯನ್ನು ಮಾಡುತ್ತದೆ.

ಡಿಪಾಸಿಟರಿ ಸಿಸ್ಟಮ್ನಲ್ಲಿ ನಿಮ್ಮ ಎಲ್ಲಾ ವಿವರಗಳನ್ನು ಸರಿಯಾಗಿ ದಾಖಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ನೀವು ಕ್ಲೈಂಟ್ ಮಾಸ್ಟರ್ ರಿಪೋರ್ಟ್ ಅನ್ನು ಪರಿಶೀಲಿಸಬೇಕು. ನೀವು ಷೇರುಗಳಲ್ಲಿ ವ್ಯಾಪಾರ ಮಾಡಲು ಬಯಸಿದರೆ (ಖರೀದಿ ಅಥವಾ ಮಾರಾಟ), ನೀವು ಸೆಬಿ ನೋಂದಾಯಿತ ಸ್ಟಾಕ್ ಬ್ರೋಕರ್ನೊಂದಿಗೆ ಟ್ರೇಡಿಂಗ್ / ಬ್ರೋಕಿಂಗ್ ಖಾತೆಯನ್ನು ತೆರೆಯಬೇಕಾಗುತ್ತದೆ. ಹೂಡಿಕೆದಾರರ ಪ್ರಯೋಜನಕ್ಕಾಗಿ 3-ರಲ್ಲಿ-1 ವ್ಯವಸ್ಥೆಯನ್ನು ಒದಗಿಸುವ ಅನೇಕ ಡಿಪಿಗಳು ಇವೆ (3 ರಲ್ಲಿ-1 ಡಿಮ್ಯಾಟ್ ಖಾತೆ, ವ್ಯಾಪಾರ ಖಾತೆ ಮತ್ತು ಬ್ಯಾಂಕ್ ಖಾತೆಯ ಸಂಯೋಜನೆಯಾಗಿದೆ).

2. ಡಿಪಿ ಅನ್ನು ನಾನು ಹೇಗೆ ಆಯ್ಕೆ ಮಾಡಲಿ?

ಉಳಿತಾಯ ಖಾತೆ ತೆರೆಯಲು ಬ್ಯಾಂಕ್ ಅನ್ನು ಆಯ್ಕೆ ಮಾಡುವಂತೆ ನೀವು ಡಿಮ್ಯಾಟ್ ಖಾತೆಯನ್ನು ತೆರೆಯಲು ನಿಮ್ಮ ಡಿಪಿಯನ್ನು ಆಯ್ಕೆ ಮಾಡಬಹುದು. ಡಿಪಿ ಆಯ್ಕೆಗೆ ಕೆಲವು ಪ್ರಮುಖ ಅಂಶಗಳು ಹೀಗಿವೆ:

ಎ. ಅನುಕೂಲ - ನಿಮ್ಮ ಕಚೇರಿ / ನಿವಾಸಕ್ಕೆ ಹತ್ತಿರದಲ್ಲಿರುವುದು, ಕೆಲಸದ ಸಮಯ.

ಬಿ. ಕಂಫರ್ಟ್ - ಡಿಪಿಯ ಖ್ಯಾತಿ, ಸಂಸ್ಥೆಯೊಂದಿಗೆ ಹಿಂದಿನ ಸಂಬಂಧ, ನಿಮಗೆ ಅಗತ್ಯವಿರುವ ನಿರ್ದಿಷ್ಟ ಸೇವೆಯನ್ನು ಡಿಪಿ ನೀಡುವ ಸ್ಥಾನದಲ್ಲಿದೆಯೇ?

ಸಿ. ಖರ್ಚು / ಸೇವೆಯ ಮಟ್ಟ - ಡಿಪಿಯಿಂದ ವಿಧಿಸಲಾಗುವ ಸೇವಾ ಶುಲ್ಕಗಳು ಮತ್ತು ಸೇವಾ ಗುಣಮಟ್ಟ.

ಡಿಪಿ ಸ್ಥಳಗಳು ಮತ್ತು ಅವುಗಳ ಹೋಲಿಕೆಯ ಶುಲ್ಕ ರಚನೆಗಾಗಿ, ದಯವಿಟ್ಟು https://nsdl.co.in/joining/joincharges.php ಗೆ ಭೇಟಿ ನೀಡಿ.

### 3. ಎಲ್ಲಾ ಡಿಪಿಗಳು ಒಂದೇ ಆಗಿವೆಯೇ?

ಎನ್.ಎಸ್.ಡಿ.ಎಲ್ ಒಂದು ಡಿಪಿ ಆಗಲು ಕೆಲವು ಮೂಲಭೂತ ಅರ್ಹತಾ ಮಾನದಂಡಗಳನ್ನು ಸೂಚಿಸಿದೆ. ಸೆಬಿ ನಿಯಮಗಳ ಅನುಗುಣವಾದ ಉಪಬಂಧಗಳು ಹೊರತುಪಡಿಸಿ ಕೆಲವು ವಿಷಯಗಳಲ್ಲಿ ಮಾನದಂಡಗಳು ಹೆಚ್ಚು ಅಥವಾ ಒಂದೇಯಾಗಿದೆ. ಒಂದು ಅರ್ಥದಲ್ಲಿ ಎಲ್ಲಾ ಡಿಪಿಗಳು ಒಂದೇ ಆಗಿರುತ್ತವೆ, ಅಂದರೆ ಅವರಿಗೆ ಸೆಬಿಯು ನೋಂದಣಿ ಪ್ರಮಾಣಪತ್ರ ನೀಡುವ ನಂತರ ಮಾತ್ರ ಅವರನ್ನು ಎನ್.ಎಸ್.ಡಿ.ಎಲ್ ನೇಮಿಸುತ್ತದೆ. ಆದಾಗ್ಯೂ, ನೀಡಿರುವ ಸೇವೆಗಳ ಪ್ರಕಾರ, ಸೇವೆ ಗುಣಮಟ್ಟ ಮತ್ತು ನೀಡುವ ಸೇವೆಗಳಿಗೆ ಶುಲ್ಕಗಳಲ್ಲಿ ಡಿಪಿಗಳ ನಡುವೆ ವ್ಯತ್ಯಾಸವಿರಬಹುದು.

### 4. ನಾನು ಡಿಮ್ಯಾಟ್ ಖಾತೆಯನ್ನು ತೆರೆಯಲು ಬಯಸಿದರೆ ಏನು ಮಾಡಬೇಕು?

ಒಂದು ನಿರ್ದಿಷ್ಟ ಡಿಪಿಯೊಂದಿಗೆ ಖಾತೆಯನ್ನು ತೆರೆಯಲು ನೀವು ನಿರ್ಧರಿಸಿದ್ದರೆ, ನೀವು ಆ ಡಿಪಿಯನ್ನು ಸಂಪರ್ಕಿಸಿ ಖಾತೆ ತೆರೆಯುವ ಫಾರಂ ಅನ್ನು ತುಂಬಬಹುದು. ನಿಮ್ಮ ಛಾಯಾಚಿತ್ರ ಮತ್ತು ಈ ಕೆಳಗಿನ ದಾಖಲೆಗಳ ಸ್ವಯಂ ದೃಢೀಕರಿಸಿದ ನಕಲನ್ನು ನೀವು ಒದಗಿಸಬೇಕಾಗಿದೆ -

ಎ. ಪ್ಯಾನ್ ಕಾರ್ಡ್ (ಪ್ಯಾನ್ ಹೊಂದಿಲ್ಲದ ಸಿಕ್ಕಿಮ್ ನಿವಾಸಿಗಳಿಗೆ, ಇತರ ಗುರುತಿನ ಪುರಾವೆ).

ಬಿ. ವಿಳಾಸದ ಪುರಾವೆ (ಪಾಸ್ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಮತದಾರರ ಗುರುತು ಕಾರ್ಡ್, ಆಧಾರ್ ಕಾರ್ಡ್ ಮತ್ತು ಎನ್.ಆರ್.ಇ.ಜಿ.ಎ. ಕೆಲಸ ಕಾರ್ಡ್, ಇದರಲ್ಲಿ ಯಾವುದಾರೊಂದು).

,ಸಿ. ನಿಮ್ಮ ಹೆಸರು, ಖಾತೆ ಸಂಖ್ಯೆ, IFSC ಮತ್ತು MICR ಕೋಡ್ ಅನ್ನು ಹೊಂದಿರುವ ರದ್ದುಗೊಂಡ ಚೆಕ್ ಅಥವಾ ಪಾಸ್ಬುಕ್ ಅಥವಾ ಬ್ಯಾಂಕ್ ಸ್ಟೇಟ್ಮೆಂಟ್ ನಕಲು.

ಪರಿಶೀಲನೆಗಾಗಿ ಡಿಪಿಗೆ ಮೂಲ ದಾಖಲೆಗಳನ್ನು ತೆಗೆದುಕೊಂಡು ಹೋಗಲು ದಯವಿಟ್ಟು ನೆನಪಿಡಿ. ನೀವು ಪರಿಶೀಲನೆಗಾಗಿ ಮೂಲ ಡಾಕ್ಯುಮೆಂಟ್ ಅನ್ನು ನೀಡಲು ಸಾಧ್ಯವಾಗದಿದ್ದರೆ, ನಕಲಿ ಪ್ರತಿಯನ್ನು ಯಾವುದೇ ಅಧಿಕೃತರಂತಹ ಪಬ್ಲಿಕ್ ನೋಟರಿ ಮೂಲಕ ಫೋಟೊಕಾಪಿಯನ್ನು ದೃಢೀಕರಿಸಬೇಕು. ಮೇಲ್ಕಂಡ ಡಾಕ್ಯುಮೆಂಟ್ಕಿಂತ ಹೆಚ್ಚುವರಿಯಾಗಿ ನಿಮ್ಮ ಡಿಪಿ ಗುರುತಿನ / ವಿಳಾಸದ ಪುರಾವೆಯನ್ನು ಅದರ ಅಗತ್ಯತೆಗಳನ್ನು ಪೂರೈಸಲು ಕೇಳಬಹುದು. ಖಾತೆ ತೆರೆಯುವ ಪ್ರಕ್ರಿಯೆಯನ್ನು ಚಿತ್ರ ಸಂಖ್ಯೆ 3 ರಲ್ಲಿ ತೋರಿಸಲಾಗಿದೆ.

ಡಿಮ್ಯಾಟ್ ಖಾತೆ ತೆರೆಯುವ ಪ್ರಕ್ರಿಯೆ




ಚಿತ್ರ 3

5. ವ್ಯಕ್ತಿಗತ ಪರಿಶೀಲನೆ ಎಂದರೇನು?

ಸೆಬಿ ಮಾರ್ಗಸೂಚಿಗಳ ಪ್ರಕಾರ ಖಾತೆ ತೆರೆಯುವ ಸಮಯದಲ್ಲಿ ಅರ್ಜಿದಾರರ ಗುರುತನ್ನು ದೃಢಪಡಿಸುವುದು ಕಡ್ಡಾಯವಾಗಿದೆ. ಖಾತೆಯನ್ನು ತೆರೆಯಲು ಬಯಸುವ ವ್ಯಕ್ತಿಯ ಖಾತೆ ತೆರೆಯುವ ಫಾರಂ ಮೇಲೆ ಅಂಟಿಸಿದ ಛಾಯಾಚಿತ್ರವನ್ನು ಮತ್ತು ಪ್ಯಾನ್ ಕಾರ್ಡ್‌ನಲ್ಲಿರುವ ಛಾಯಾಚಿತ್ರದೊಂದಿಗೆ ಪರಿಶೀಲಿಸುವ ಮೂಲಕ ಡಿಪಿಯ ಸಿಬ್ಬಂದಿ ಇದನ್ನು ಮಾಡುತ್ತಾರೆ. ಜಂಟಿ ಖಾತೆದಾರರಿಗೆ, ಎಲ್ಲಾ ಖಾತೆದಾರರ 'ವ್ಯಕ್ತಿಗತ ಪರಿಶೀಲನೆ' ಅಗತ್ಯವಿರುತ್ತದೆ.

6. ಒಂದಕ್ಕಿಂತ ಹೆಚ್ಚು ಡಿಮ್ಯಾಟ್ ಖಾತೆಯನ್ನು ನಾನು ತೆರೆಯಬಹುದೇ?

ಹೌದು. ನಿಮ್ಮ ಅಗತ್ಯ ಮತ್ತು ಆದ್ಯತೆಗಳ ಪ್ರಕಾರ ಒಂದೇ ಡಿಪಿ ಅಥವಾ ಬೇರೆ ಡಿಪಿಗಳೊಂದಿಗೆ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ನೀವು ತೆರೆಯಬಹುದು. ಅಂತಹ ಎಲ್ಲಾ ಖಾತೆಗಳಿಗೆ ಖಾತೆ ತೆರೆಯುವ ಶುಲ್ಕವನ್ನು ನೀವು ಪಾವತಿಸಬೇಕಾಗಬಹುದು ಎಂಬುದನ್ನು ದಯವಿಟ್ಟು ಗಮನಿಸಿ.

7. ನನ್ನ ಡಿಮ್ಯಾಟ್ ಖಾತೆಯಲ್ಲಿ ಸೆಕ್ಯುರಿಟೀಸ್ಗಳ ಯಾವುದೇ ಕನಿಷ್ಠ ಬ್ಯಾಲೆನ್ಸ್ ಅನ್ನು ಉಳಿಸಬೇಕೇ?

ಇಲ್ಲ. ಡಿಪಾಸಿಟರಿಯು ಯಾವುದೇ ಕನಿಷ್ಠ ಬ್ಯಾಲೆನ್ಸ್ ಅನ್ನು ಸೂಚಿಸಿಲ್ಲ. ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಶೂನ್ಯ ಬ್ಯಾಲೆನ್ಸ್ ಅನ್ನು ನೀವು ಹೊಂದಬಹುದು.

8. ಖಾತೆ ತೆರೆಯುವ ಸಮಯದಲ್ಲಿ ನಾನು ನನ್ನ ಬ್ಯಾಂಕ್ ಖಾತೆ ವಿವರಗಳನ್ನು ಯಾಕೆ ನೀಡಬೇಕು?

ಡಿಮ್ಯಾಟ್ ಖಾತೆ ತೆರೆಯುವ ಸಮಯದಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ನೀಡುವುದು ಕಡ್ಡಾಯ. ನಿಮ್ಮ ಬ್ಯಾಂಕ್ ಖಾತೆಯಲ್ಲಿ ನೇರವಾಗಿ ನಿಮಗೆ ಪಾವತಿಸುವ ಯಾವುದೇ ಮೊತ್ತವನ್ನು (ಡಿವಿಡೆಂಡ್, ಬಡ್ಡಿ ಅಥವಾ ಮೆಚುರಿಟಿ ಪಾವತಿ ಅಥವಾ ರಿಡೆಂಪ್ಶನ್ ಮೊತ್ತದಂತಹ) ಕ್ರೆಡಿಟ್ ನೀಡುವಂತೆ ಈ ಬ್ಯಾಂಕ್ ವಿವರಗಳನ್ನು ಇಶ್ಯೂರ್ ಕಂಪನಿಗಳು / ಆರ್.ಟಿ.ಎಗಳಿಗೆ ತಿಳಿಸಲಾಗುತ್ತದೆ. ಆದ್ದರಿಂದ ಖಾತೆ ತೆರೆಯುವ ಫಾರಂನಲ್ಲಿ ನಿಮ್ಮ ಸಕ್ರಿಯ ಬ್ಯಾಂಕ್ ಖಾತೆಯ ವಿವರಗಳನ್ನು ನೀವು ಒದಗಿಸುವಂತೆ ಸೂಚಿಸಲಾಗಿದೆ. ನಂತರ, ಅದರಲ್ಲಿ ಬದಲಾವಣೆಯ ಸಂದರ್ಭದಲ್ಲಿ, ದಯವಿಟ್ಟು ನಿಮ್ಮ ಡಿಪಿಯನ್ನು ತಿಳಿಸಲು ಮರೆಯದಿರಿ.

9. ಖಾತೆ ತೆರೆಯುವ ಫಾರಂನಲ್ಲಿ ನೀಡಲಾದ 'ಸ್ವಯಂಚಾಲಿತವಾಗಿ ಕ್ರೆಡಿಟ್ ಪಡೆಯಲು ಸ್ಟ್ಯಾಂಡಿಂಗ್ ಇನ್ಸ್ಟ್ರಕ್ಷನ್' ಎಂದರೇನು?

ಡಿಮ್ಯಾಟ್ ಖಾತೆಯಲ್ಲಿ, ಡೆಬಿಟ್ ಅಥವಾ ಕ್ರೆಡಿಟ್ ಟ್ರಾನ್ಸಾಕ್ಷನ್ಸ್ ಅನ್ನು ಆಯಾ ಖಾತೆದಾರ(ರು)ರಿಂದ ಸರಿಯಾಗಿ ಅನುಮೋದಿಸಿದರೆ ಮಾತ್ರ ಅನುಮತಿಸಲಾಗುತ್ತದೆ. ಡಿಮ್ಯಾಟ್ ಖಾತೆಯಲ್ಲಿ ಪ್ರತಿ ಡೆಬಿಟ್ ವರ್ಗಾವಣೆಗೆ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ (ಡಿಐಎಸ್) ಅಗತ್ಯವಿರುವ ಹಾಗೆ, ಡಿಮ್ಯಾಟ್ ಖಾತೆಯಲ್ಲಿನ ಪ್ರತಿ ಕ್ರೆಡಿಟ್ ವರ್ಗಾವಣೆಗೆ 'ರಿಸೀಪ್ಟ್ ಇನ್ಸ್ಟ್ರಕ್ಷನ್ ಸ್ಲಿಪ್' ಅಗತ್ಯವಿದೆ. ನಿಮ್ಮ ಡಿಪಿಗೆ ಒಮ್ಮೆಲೆ ಸ್ಟ್ಯಾಂಡಿಂಗ್ ಇನ್ಸ್ಟ್ರಕ್ಷನ್ ಅನ್ನು ನೀಡುವ ಮೂಲಕ, ಖಾತೆಯಲ್ಲಿ ಕ್ರೆಡಿಟ್ ನಿರೀಕ್ಷಿಸಿದಾಗ ರಶೀದಿ ಸೂಚನೆಯನ್ನು ನೀಡುವುದನ್ನು ತಪ್ಪಿಸಬಹುದು.

10. ಬ್ಯಾಂಕ್ ಖಾತೆಯಂತೆ 'ಇಬ್ಬರಲ್ಲಿ ಯಾರಾದರೂ ಒಬ್ಬರು ಅಥವಾ ಸರ್ವಾಯರ್' ಆಧಾರದ ಮೇಲೆ ನಾನು ಜಂಟಿ ಖಾತೆಯನ್ನು ನಿರ್ವಹಿಸಬಹುದೇ?

ಇಲ್ಲ. ಪ್ರಸ್ತುತ ಅನ್ವಯವಾಗುವ ನಿಯಮಗಳ ಪ್ರಕಾರ, ಬ್ಯಾಂಕ್ ಖಾತೆಯಂತೆ 'ಇಬ್ಬರಲ್ಲಿ ಯಾರಾದರೂ ಒಬ್ಬರು ಅಥವಾ ಸರ್ವಾಯರ್' ಆಧಾರದ ಮೇಲೆ ಡಿಮ್ಯಾಟ್ ಖಾತೆಯನ್ನು ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ, ಜಂಟಿಯಾಗಿ ಹಿಡಿದಿರುವ ಡಿಮ್ಯಾಟ್ ಖಾತೆಗೆ ನೀಡಲಾಗುವ ಪ್ರತಿ ಸೂಚನೆಯು ಎಲ್ಲಾ ಜಂಟಿದಾರರಿಂದ ಸಹಿ ಮಾಡಬೇಕಾಗಿದೆ.

11. ನನ್ನ ಎಲ್ಲಾ ಸೆಕ್ಯುರಿಟೀಸ್ಗಳನ್ನು ಮತ್ತೊಂದು ಡಿಪಿಯೊಂದಿಗೆ ವರ್ಗಾಯಿಸಿ ಮತ್ತು ನನ್ನ ಡಿಮ್ಯಾಟ್ ಖಾತೆಯನ್ನು ಒಂದು ಡಿಪಿಯೊಂದಿಗೆ ಮುಚ್ಚಬಹುದೇ?

ಹೌದು. ಒಂದು ವೇಳೆ ನೀವು ಒಂದಕ್ಕಿಂತ ಹೆಚ್ಚು ಡಿಪಿಯೊಂದಿಗೆ ಬಹು ಡಿಮ್ಯಾಟ್ ಖಾತೆಗಳನ್ನು ಹೊಂದಿದ್ದರೆ ಮತ್ತು ಅವರೊಂದಿಗೆ ಮುಂದುವರಿಯಲು ಇಚ್ಛಿಸದಿದ್ದರೆ, ನೀವು ನಿಗದಿತ ರೂಪದಲ್ಲಿ ಖಾತೆಯನ್ನು ಮುಚ್ಚುವ ಫಾರಂ ನಿಮ್ಮ ಡಿಪಿ (ಗಳು)ಗೆ ಸಲ್ಲಿಸಬಹುದು. ನೀವು ಬ್ಯಾಲೆನ್ಸ್ ಅನ್ನು ವರ್ಗಾವಣೆ ಮಾಡಲು ಬಯಸುವ ಡಿಪಿಯ ಡಿಪಿ ಐಡಿ, ಡಿಪಿ ಹೆಸರು ಮತ್ತು ಖಾತೆಯ ಕ್ಲೈಂಟ್ ಐಡಿ ಅನ್ನು ಫಾರಂನಲ್ಲಿ ನಮೂದಿಸಬೇಕು. ನಿಮ್ಮ ಡಿಪಿಯು ನಿಮ್ಮ ಎಲ್ಲಾ ಸೆಕ್ಯುರಿಟೀಸ್ಗಳನ್ನು ನಿಮ್ಮ ಸೂಚನೆಯಂತೆ ವರ್ಗಾಯಿಸಿ ನಿಮ್ಮ ಡಿಮ್ಯಾಟ್ ಖಾತೆಯನ್ನು ಮುಚ್ಚುತ್ತಾರೆ. ಖಾತೆಯಲ್ಲಿ ಯಾವುದೇ ಬ್ಯಾಲೆನ್ಸ್ ಇದ್ದಲ್ಲಿ ಡಿಮ್ಯಾಟ್ ಖಾತೆಯನ್ನು ಮುಚ್ಚಲಾಗುವುದಿಲ್ಲ ಎಂದು ತಿಳಿದುಕೊಳ್ಳುವುದು ಬಹಳ ಮುಖ್ಯ.

12. ನನ್ನ ಎನ್.ಎಸ್.ಡಿ.ಎಲ್. ಡಿಮ್ಯಾಟ್ ಖಾತೆಯೊಂದಿಗೆ ನಾನು ಏನು ಮಾಡಬಹುದು?

ನಿಮ್ಮ ಎನ್.ಎಸ್.ಡಿ.ಎಲ್. ಡಿಮ್ಯಾಟ್ ಖಾತೆಯ ಹಲವಾರು ಉಪಯೋಗಗಳಿವೆ. ನಿಮ್ಮ ಎನ್.ಎಸ್.ಡಿ.ಎಲ್. ಡಿಮ್ಯಾಟ್ ಖಾತೆಯೊಂದಿಗೆ ನೀವು ಮಾಡಬಹುದಾದ ಕೆಲವು ಮುಖ್ಯ ವಿಷಯಗಳು ಕೆಳಗೆ ನೀಡಲಾಗಿದೆ -

ಎ. ನೀವು ಐಪಿಒಗಳು ಮತ್ತು ಎನ್ಎಫ್ಒಗಳಿಗೆ ಅಪ್ಲೈ ಮಾಡಬಹುದು. ಅಪ್ಲಿಕೇಷನ್ ಫಾರಂನಲ್ಲಿ ನಿಮ್ಮ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಸರಿಯಾಗಿ ನಮೂದಿಸುವುದನ್ನು ಮರೆಯಬೇಡಿ. ಅದೇ ಡಿಮ್ಯಾಟ್ ಖಾತೆಯನ್ನು ಷೇರುಗಳನ್ನು ಮತ್ತು ಇತರ ರೀತಿಯ ಸೆಕ್ಯೂರಿಟಿಗಳನ್ನು ಖರೀದಿಸಲು ಮತ್ತು ಹಿಡಿದಿಡಲು ಬಳಸಬಹುದು.

ಬಿ. ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ನೀವು ಎಲ್ಲಾ ಕಾರ್ಪೊರೇಟ್ ಅನುಕೂಲಗಳನ್ನು (ಬೋನಸ್, ಹಕ್ಕುಗಳು, ಇತ್ಯಾದಿ) ಸ್ವಯಂಚಾಲಿತವಾಗಿ ಪಡೆಯುತ್ತೀರಿ. ನಿಮ್ಮ ಕಂಪೆನಿ ಘೋಷಿಸಿದ ಡಿವಿಡೆಂಡ್, ಬಡ್ಡಿ ಅಥವಾ ನಿಮ್ಮ ಬಾಂಡ್ ಹೂಡಿಕೆ ಮೇಲೆ ಪಾವತಿಸಬೇಕಾದ ಮೆಚುರಿಟಿ ಮೊತ್ತ ಇತ್ಯಾದಿ ನಗದು ಪ್ರಯೋಜನಗಳನ್ನು ನಿಮ್ಮ ಡಿಮ್ಯಾಟ್ ಖಾತೆಯೊಂದಿಗೆ ಲಿಂಕ್ ಮಾಡಲಾದ ಬ್ಯಾಂಕ್ ಖಾತೆಗೆ ಕ್ರೆಡಿಟ್ಟಾಗುತ್ತದೆ. ಬ್ಯಾಂಕ್ ಖಾತೆಯ ಸರಿಯಾದ ವಿವರಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ದಾಖಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಸಿ. ಹೂಡಿಕೆಗಳನ್ನು ಮಾರಾಟ ಮಾಡುವ ಅಗತ್ಯವಿಲ್ಲದೆ ನಿಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಲು ಅನೇಕ ಬ್ಯಾಂಕುಗಳು ಒದಗಿಸುವ "ಷೇರುಗಳ ವಿರುದ್ಧ ಸಾಲ" ಸೌಲಭ್ಯವನ್ನು ಪಡೆಯಲು ನಿಮ್ಮ ಡಿಮ್ಯಾಟ್ ಖಾತೆಯನ್ನು ನೀವು ಬಳಸಬಹುದು.

ಡಿ. ಕಾಗದ ರೂಪದಲ್ಲಿರುವ ನಿಮ್ಮ ಎಲ್ಲಾ ಹೂಡಿಕೆಗಳನ್ನು ಷೇರುಗಳು, ಬಾಂಡ್ಗಳು, ಡಿಬೆಂಚರ್ಗಳು, ಸರ್ಕಾರಿ ಸೆಕ್ಯುರಿಟೀಸ್, ಸಾವರಿನ್ ಗೋಲ್ಡ್ ಬಾಂಡ್ಗಳು ಇತ್ಯಾದಿ ನಿಮ್ಮ ಡಿಪಿ ಮೂಲಕ ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಬಹುದು.

ಇ. ನೀವು ಅದೇ ಡಿಮ್ಯಾಟ್ ಖಾತೆಯಲ್ಲಿ ನಿಮ್ಮ ಮ್ಯೂಚುಯಲ್ ಫಂಡ್ ಹೂಡಿಕೆಗಳನ್ನು ಹಿಡಿದಿಟ್ಟುಕೊಳ್ಳಬಹುದು. ಡಿಮ್ಯಾಟ್ ಖಾತೆಯಲ್ಲಿನ ಮ್ಯೂಚುಯಲ್ ಫಂಡ್ ಯುನಿಟ್ಗಳನ್ನು ನಿಭಾಯಿಸುವುದು ನಿಮಗೆ ಹೆಚ್ಚು ಸುಲಭವಾಗುತ್ತದೆ. ಎನ್.ಎಸ್.ಡಿ.ಎಲ್. ಸಿಎಎಸ್ ಮೂಲಕ ನಿಮ್ಮ ಪೋರ್ಟ್ಫೋಲಿಯೊವನ್ನು ಒಂದೇ ಸ್ಥಳದಲ್ಲಿ ನೀವು ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತದೆ. ನಿಮ್ಮ ವೈಯಕ್ತಿಕ ಮಾಹಿತಿ, ಉದಾಹರಣೆಗೆ, ವಿಳಾಸ ಅಥವಾ ಬ್ಯಾಂಕ್ ವಿವರಗಳು ಅಥವಾ ನಾಮಿನಿ, ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ನೀವು ಬಯಸಿದರೆ ವಿವಿಧ ಮ್ಯೂಚುಯಲ್ ಫಂಡ್ ಮನೆಗಳನ್ನು ತೊಡಗಿಸಿಕೊಳ್ಳುವ ಅಗತ್ಯತೆಯಿಂದ ಇದು ನಿಮ್ಮನ್ನು ಉಳಿಸುತ್ತದೆ. ನಿಮ್ಮ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿಯನ್ನು ಅಪ್ಲಿಕೇಶನ್ ಫಾರಂನಲ್ಲಿ ನಮೂದಿಸುವದರಿಂದ ನೀವು ಸರಳವಾಗಿ ಡಿಮ್ಯಾಟ್ ರೂಪದಲ್ಲಿ ಮ್ಯೂಚುಯಲ್ ಫಂಡ್ ಯೂನಿಟ್ಗಳಿಗೆ ಚಂದಾದಾರರಾಗಬಹುದು. ನಿಮ್ಮ ಡಿಮ್ಯಾಟ್ ಖಾತೆಯ ಮೂಲಕ ಮ್ಯೂಚುಯಲ್ ಫಂಡ್ಗಳಲ್ಲಿನ ಹೂಡಿಕೆಯು ಎಸ್.ಐ.ಪಿ.ಯ ಮೂಲಕವೂ ಸಾಧ್ಯವಿದೆ. ಮ್ಯೂಚುಯಲ್ ಫಂಡ್ ಯುನಿಟ್ಗಳ ವಿಮೋಚನೆ ಅಥವಾ ಮರುಖರೀದಿಗಾಗಿ, ನೀವು ನಿಮ್ಮ ಡಿಪಿಗೆ ಸೂಚನೆ ನೀಡಬಹುದು ಅಥವಾ ಎನ್.ಎಸ್.ಡಿ.ಎಲ್. ಸ್ಪೀಡ್ -ಇ ಸೌಲಭ್ಯವನ್ನು ಬಳಸಬಹುದು.

ಎಫ್. ನಿಮ್ಮ ಡಿಮ್ಯಾಟ್ ಖಾತೆಯ ಮೂಲಕ ಕಂಪೆನಿಗಳಿಗೆ ಷೇರಗಳನ್ನು ಸಲ್ಲಿಸುವ ಮೂಲಕ ಮರುಖರೀದಿಯ ಆಫರ್ನಲ್ಲಿ ನೀವು ಭಾಗವಹಿಸಬಹುದು.

ಜಿ. ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಐಡಲ್ ಬಿದ್ದ ಸೆಕ್ಯುರಿಟೀಸ್ಗಳನ್ನು ನೀಡುವ ಮೂಲಕ ನೀವು ಸೆಕ್ಯೂರಿಟಿ ಸಾಲ ಮತ್ತು ಎರವಲು ಯೋಜನೆಯಲ್ಲಿ ಪಾಲ್ಗೊಳ್ಳಬಹುದು ಮತ್ತು ಮಾರುಕಟ್ಟೆ ರಿಟರ್ನ್ಸ್ ಗಳಿಸಬಹುದು.

ಡಿಮ್ಯಾಟ್ ಖಾತೆಯ ಬೇಸಿಕ್ ಸೇವೆಗಳು

1. ಬೇಸಿಕ್ ಸೇವೆಗಳ ಡಿಮ್ಯಾಟ್ ಖಾತೆಯ (ಬಿ.ಎಸ್.ಡಿ.ಎ) ಎಂದರೇನು?

ಬಿ.ಎಸ್.ಡಿ.ಎ ನಿಯಮಿತ ಡಿಮ್ಯಾಟ್ ಖಾತೆಯಂತೆ ಆದರೆ ಕಡಿಮೆ ಅಥವಾ ಯಾವುದೆ ವಾರ್ಷಿಕ ನಿರ್ವಹಣೆ ಶುಲ್ಕಗಳು ಇಲ್ಲ.

2. ಬಿ.ಎಸ್.ಡಿ.ಎ ಪ್ರಯೋಜನವನ್ನು ಪಡೆಯಲು ಷರತ್ತುಗಳು ಯಾವುವು?

ಕೆಳಗಿನ ಷರತ್ತುಗಳನ್ನು ಪೂರೈಸುವ ವ್ಯಕ್ತಿಗಳು ಬಿ.ಎಸ್.ಡಿ.ಎ ಸೌಲಭ್ಯಗಳನ್ನು ಪಡೆಯಬಹುದು -

ಎ. ಒಬ್ಬನೇ ಅಥವಾ ಮೊದಲ ಹೋಲ್ಡರ್ ಆಗಿ ಒಂದೇ ಡಿಮ್ಯಾಟ್ ಖಾತೆಯನ್ನು ಹೊಂದಿರುವ ವ್ಯಕ್ತಿಗಳು (ಒಟ್ಟಾರೆ ಡೆಪೋಸಿಟೋರಿಸ್).

ಬಿ. ವ್ಯಕ್ತಿಗಳು ಯಾವುದೇ ಡಿಮ್ಯಾಟ್ ಖಾತೆ (ಗಳು) ಹೊಂದಿರುವ ಎರಡನೆಯ ಅಥವಾ ಮೂರನೇ ಆಗಿರಬಹುದು.

ಸಿ. ಡಿಮ್ಯಾಟ್ ಖಾತೆಯಲ್ಲಿರುವ ಸೆಕ್ಯುರಿಟೀಸ್ಗಳ ಬೆಲೆಯು ಯಾವುದೇ ಸಮಯದಲ್ಲು ರೂ.2,00,000 ಕ್ಕಿಂತ ಹೆಚ್ಚು ಮೀರಬಾರದು.

ಡಿ. ಬಿ.ಎಸ್.ಡಿ.ಎ ಅನ್ನು ಪಡೆಯಲು ಮೊಬೈಲ್ ಸಂಖ್ಯೆಯನ್ನು ಒದಗಿಸಿ ಎಸ್.ಎಮ್.ಎಸ್. ಅಲರ್ಟ್ ಅನ್ನು ಆಯ್ಕೆ ಮಾಡುವುದು ಅಗತ್ಯ.

3. ಬಿ.ಎಸ್.ಡಿ.ಎ ಗೆ ವಾರ್ಷಿಕ ನಿರ್ವಹಣೆ ಶುಲ್ಕಗಳು (ಎಎಂಸಿ) ಯಾವುವು?

ಸೆಬಿಯಿಂದ ವಿಧಿಸಿದ ಬಿ.ಎಸ್.ಡಿ.ಎಗೆ ವಾರ್ಷಿಕ ನಿರ್ವಹಣೆಯ ಶುಲ್ಕಗಳು ಈ ಕೆಳಕಂಡಂತಿವೆ:

ಎ. ಹಿಡುವಳಿ ಮೌಲ್ಯವು ರೂ. 50,000 ವರೆಗೆ ಇದ್ದರೆ ಎಎಂಸಿ ಇಲ್ಲ.

ಬಿ. ಹಿಡುವಳಿ ಮೌಲ್ಯವು ರೂ. 50,000 ಗಿಂತ ಹೆಚ್ಚು ರೂ.2,00,000 ಕ್ಕಿಂತ ಕಡಿಮೆ ಇದ್ದರೆ, ಆಗ ಎಎಂಸಿ ವರ್ಷಕ್ಕೆ ರೂ.100 ಅನ್ನು ಮೀರದಂತೆ ವಿಧಿಸಬಹುದು.

ಸಿ. ರೂ.2,00,000 ಮೀರಿದ ಹಿಡುವಳಿಯ ಮೌಲ್ಯಕ್ಕೆ, ಡಿಪಿ ತನ್ನ ನಿಯಮಿತ ದರಗಳ ಪ್ರಕಾರ ಎಎಂಸಿ ಶುಲ್ಕ ವಿಧಿಸಬಹುದು.

ಈ ಉದ್ದೇಶಕ್ಕಾಗಿ ಹಿಡುವಳಿ ಮೌಲ್ಯವನ್ನು ದೈನಂದಿನ ಮುಚ್ಚುವ ಬೆಲೆಯ ಆಧಾರದ ಮೇಲೆ ಅಥವಾ ಸೆಕ್ಯುರಿಟೀಸ್ / ಮ್ಯೂಚುಯಲ್ ಫಂಡ್ ಯೂನಿಟ್ಗಳ ಎನ್ಎವಿ ಆಧಾರದ ಮೇಲೆ ಡಿಪಿ ನಿರ್ಧರಿಸುತ್ತದೆ. ಯಾವ ದಿನದಂದು ಬಿ.ಎಸ್.ಡಿ.ಎ ಹಿಡುವಳಿ ಮೌಲ್ಯವು ರೂ.2,00,000ಕ್ಕೆ ಮೀರಿದ್ದರೆ, ಡಿಪಿ ಆ ದಿನದಿಂದ ನಿಯಮಿತ ಖಾತೆಗಳಿಗೆ (ಬಿಎಸ್ಡಿಎ ಅಲ್ಲದ) ಅನ್ವಯವಾಗುವಂತೆ ಶುಲ್ಕಗಳು ವಿಧಿಸಬಹುದು.

## ಸೆಕ್ಯುರಿಟೀಸ್ಗಳ ಡಿಮೆಟಿರಿಯಲೈಸೇಶನ್

1. ಡಿಮೆಟಿರಿಯಲೈಸೇಶನ್ ಎಂದರೇನು?

ಡಿಮೆಟಿರಿಯಲೈಸೇಶನ್ ಎನ್ನುವುದು ಸೆಕ್ಯುರಿಟೀಸ್ಗಳ ಭೌತಿಕ ಪ್ರಮಾಣಪತ್ರಗಳನ್ನು ಸೆಕ್ಯುರಿಟೀಸ್ಗಳ ಎಲೆಕ್ಟ್ರಾನಿಕ್ ರೂಪದಲ್ಲಿ ಡಿಪಿಯೊಂದಿಗೆ ಹೂಡಿಕೆದಾರರ ಡಿಮ್ಯಾಟ್ ಖಾತೆಯಲ್ಲಿ ಕ್ರೆಡಿಟ್ ಮೂಲಕ ಮಾರ್ಪಡಿಸುವ ಪ್ರಕ್ರಿಯೆಯಾಗಿದೆ. ಡಿಮೆಟಿರಿಯಲೈಸೇಷನ್ ಹಿಡುವಳಿ ರೂಪದಲ್ಲಿ ಬದಲಾವಣೆಯಾಗಿದ್ದು, ಇದು ಮಾಲೀಕತ್ವದ ಬದಲಾವಣೆಗೆ ಕಾರಣವಾಗುವುದಿಲ್ಲ.

2. ನನ್ನ ಸೆಕ್ಯುರಿಟೀಸ್ಗಳ ಪ್ರಮಾಣಪತ್ರಗಳನ್ನು ನಾನು ಹೇಗೆ ಡಿಮೆಟಿರಿಯಲೈಸ್ ಮಾಡಬಹುದು?

ಪ್ರಮಾಣಪತ್ರಗಳನ್ನು ಡಿಮೆಟಿರಿಯಲೈಸ್ ಮಾಡಲು ನೀವು ಡಿಮ್ಯಾಟ್ ಖಾತೆಯನ್ನು ತೆರೆಯಬೇಕಾಗುತ್ತದೆ. ಡಿಮ್ಯಾಟ್ ಖಾತೆ ತೆರೆದ ನಂತರ, ನೀವು 'ಡಿಮೆಟಿರಿಯಲೈಸೇಶನ್ ವಿನಂತಿ ಫಾರಂ' ಅನ್ನು ನಿಗದಿತ ರೂಪದಲ್ಲಿ ತುಂಬಿ ಸೆಕ್ಯುರಿಟೀಸ್ ಪ್ರಮಾಣಪತ್ರಗಳೊಂದಿಗೆ ನಿಮ್ಮ ಡಿಪಿಯಲ್ಲಿ ಸಲ್ಲಿಸಬೇಕು. ನಿಮ್ಮ ಡಿಪಿ ಮುಂದಿನ ಪ್ರಕ್ರಿಯೆಗಾಗಿ ಸಂಬಂಧಿಸಿದ ಇಶೂಯರ್ ಕಂಪನಿ ಅಥವಾ ಅದರ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟ್ಗೆ ಡಿಮ್ಯಾಟ್ ವಿನಂತಿಯನ್ನು ಕಳಿಸುತ್ತದೆ. ವಿನಂತಿಯನ್ನು ಸಂಬಂಧಪಟ್ಟ ವಿತರಕ ಕಂಪನಿ ಅಥವಾ ಅದರ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟ್

ದೃಢಪಡಿಸಿದ ನಂತರ, ಅದು ಆಯಾ ಹೂಡಿಕೆದಾರರ ಡಿಮ್ಯಾಟ್ ಖಾತೆಯಲ್ಲಿ ಎಲೆಕ್ಟ್ರಾನಿಕ್ ಸೆಕ್ಯುರಿಟಿಗಳ ಕ್ರೆಡಿಟ್ಗೆ ಕಾರಣವಾಗುತ್ತದೆ. ಡಿಮೆಟಿರಿಯಲೈಸೇಶನ್ ಪ್ರಕ್ರಿಯೆಯನ್ನು ಚಿತ್ರ ಸಂಖ್ಯೆ 4 ರಲ್ಲಿ ತೋರಿಸಲಾಗಿದೆ.

**ಡಿಮೆಟಿರಿಯಲೈಸೇಶನ್ ಪ್ರಕ್ರಿಯೆ**




ಚಿತ್ರ 4

3. ನಾನು ಯಾವುದೇ ಷೇರು ಪ್ರಮಾಣಪತ್ರವನ್ನು ಡಿಮೆಟರಿಯಲೈಸ್ ಮಾಡಬಹುದೇ?

ಇಲ್ಲ, ಎಲ್ಲಾ ಷೇರು ಪ್ರಮಾಣಪತ್ರಗಳನ್ನು ಡಿಮೆಟಿರಿಯಲೈಸ್ ಮಾಡಲಾಗುವುದಿಲ್ಲ. ಡಿಮೆಟಿರಿಯಲೈಸೇಶನ್ಗಾಗಿ, ಕೆಳಗಿನ ಷರತ್ತುಗಳನ್ನು ಪೂರೈಸಬೇಕು -

ಎ. ಇಶೂಯರ್ ಕಂಪೆನಿ / ಅದರ ಆರ್.ಟಿ.ಎ.ಯ ದಾಖಲೆಗಳಲ್ಲಿ ಈಗಾಗಲೇ ನಿಮ್ಮ ಹೆಸರಿನಲ್ಲಿ ನೋಂದಾಯಿಸಲಾದ ಷೇರು ಪ್ರಮಾಣಪತ್ರಗಳನ್ನು ಮಾತ್ರ ನೀವು ಡಿಮೆಟರಿಯಲೈಸ್ ಮಾಡಬಹುದು.

ಬಿ. ಇಶೂಯರ್ ಕಂಪನಿ ಎನ್.ಎಸ್.ಡಿ.ಎಲ್. ಸೇರಿದ್ದು ಆ ಷೇರುಗಳಿಗಾಗಿ ಐಎಸ್ಐಎನ್ ಪಡೆದಿರಬೇಕು.

ಸಿ. ಷೇರುಗಳು ಯಾವುದೇ ಹೊಣೆಗಾರಿಕೆ ಅಥವಾ ಚಾರ್ಜ್ ಅಥವಾ ಎನ್ಕಂಪ್ರನ್ಸ್ ನಿಂದ ಮುಕ್ತವಾಗಿರಬೇಕು.

ಪಟ್ಟಿಮಾಡಿದ ಮತ್ತು ಸಕ್ರಿಯ ಕಂಪನಿಗಳ ಪೈಕಿ ಹೆಚ್ಚಿನವು ಈಗಾಗಲೇ ಎನ್.ಎಸ್.ಡಿ.ಎಲ್. ಸೇರಿದ್ದು ಅವುಗಳ ಷೇರುಗಳು ಮತ್ತು ಇತರ ರೀತಿಯ ಸೆಕ್ಯುರಿಟೀಸ್ ಡಿಮ್ಯಾಟ್ಗೆ ಲಭ್ಯವಿವೆ. ಅನೇಕ ಇತರ ಕಂಪನಿಗಳು ಎನ್.ಎಸ್.ಡಿ.ಎಲ್. ಸೇರುವ ಪ್ರಕ್ರಿಯೆಯಲ್ಲಿವೆ. ನೀವು ಹೊಂದಿರುವ ಷೇರುಗಳು ಡಿಮ್ಯಾಟ್ಗೆ ಲಭ್ಯವಿದೆಯೇ ಅಥವಾ ಇಲ್ಲವೇ ಎಂದು, https://nsdl.co.in/master_search.php ನಲ್ಲಿ ನೀವು ಹುಡುಕಬಹುದು.

### 4. ಡಿಮೆಟಿರಿಯಲೈಸೇಶನ್ಗಾಗಿ ನನ್ನ ಪ್ರಮಾಣಪತ್ರವನ್ನು ಡಿಪಿಗೆ ಸಲ್ಲಿಸುವ ಮೊದಲು ನಾನು ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು?

ನೀವು ಅನುಸರಿಸಬೇಕಾದ ಮುನ್ನೆಚ್ಚರಿಕೆ ಕೆಳಕಂಡಂತಿದೆ -

ಎ. ನೀವು ಸೆಕ್ಯುರಿಟೀಸ್ಗಳ ನೋಂದಾಯಿತ ಮಾಲೀಕ ಎಂದು ಪರಿಶೀಲಿಸಿ.

ಬಿ. ನೀವು ಡಿಮ್ಯಾಟ್ ವಿನಂತಿಯನ್ನು ಪ್ರಾರಂಭಿಸಲು ಬಯಸುವ ಡಿಮ್ಯಾಟ್ ಖಾತೆ ಮತ್ತು ಸೆಕ್ಯುರಿಟೀಸ್ಗಳ ಮಾಲೀಕತ್ವ ಪ್ಯಾಟರ್ನ್ ಒಂದೇ ಇದೆಯೇ, (ಪ್ಯಾಟರ್ನ್ ವಿಭಿನ್ನವಾದಲ್ಲಿ ಕೆಳಗಿನ Q 13 ಕ್ಕೆ ಉತ್ತರವನ್ನು ನೋಡಿ).

ಸಿ. ನೀವು ಡಿಮೆಟಿರಿಯಲೈಸ್ ಮಾಡಲು ಬಯಸುವ ಸೆಕ್ಯುರಿಟೀಸ್ಗಳು ಎನ್.ಎಸ್.ಡಿ.ಎಲ್. ಅಲ್ಲಿ ಡಿಮ್ಯಾಟ್ಗೆ ಲಭ್ಯವಿವೆಯೆ ಎಂದು ಪರಿಶೀಲಿಸಿ.

ಡಿ. ನೀವು ಷೇರುಗಳನ್ನು ಹೊಂದಿರುವ ಕಂಪನಿಗೆ ಆರ್.ಟಿ.ಎ ಸೇವೆಗಳನ್ನು ನಿಲ್ಲಿಸಲಿಲ್ಲವೆಂದು ಪರಿಶೀಲಿಸಿ. ಇದನ್ನು https://nsdl.co.in/list-comp.php ನಲ್ಲಿ ಹುಡುಕಬಹುದು.

ಇ. ಮೇಲಿನ ಹಂತಗಳ ನಂತರ, ನೀವು 'ಡಿಮೆಟೀರಿಯಲೈಸೇಷನ್ಗಾಗಿ ಒಪ್ಪಿಸಲಾದ' ಪದಗಳೊಂದಿಗೆ ಡಿಮೆಟಿರಿಯಲೈಸ್ ಮಾಡಲು ಬಯಸುವ ಷೇರು ಪ್ರಮಾಣಪತ್ರಗಳನ್ನು ಗುರುತಿಸಬಹುದು. ಈ ಉದ್ದೇಶಕ್ಕಾಗಿ ನಿಮ್ಮ ಡಿಪಿ ನಿಮಗೆ ರಬ್ಬರ್ ಸ್ಟ್ಯಾಂಪ್ ಅನ್ನು ಒದಗಿಸುತ್ತದೆ.

ಮೇಲಿನಂತೆ ಪ್ರಮಾಣಪತ್ರಗಳನ್ನು ಸರಿಯಾಗಿ ಗುರುತಿಸಲಾಗಿದೆ ಎಂದು ಖಾತ್ರಿಪಡಿಸಿದ ನಂತರ, ನಿಮ್ಮ ಡಿಪಿಗೆ ಡಿ.ಆರ್.ಫ್ ಜೊತೆಗೆ ಷೇರು ಪ್ರಮಾಣಪತ್ರಗಳನ್ನು ಮುಂದಿನ ಪ್ರಕ್ರಿಯೆಗಾಗಿ ಸಲ್ಲಿಸಬಹುದು.

### 5. ಡಿಮೆಟಿರಿಯಲೈಸೇಶನ್ ಪ್ರಕ್ರಿಯೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ?

ಸೆಬಿ ಮಾರ್ಗಸೂಚಿಗಳ ಪ್ರಕಾರ, ಡಿಮ್ಯಾಟ್ ವಿನಂತಿಯನ್ನು ಪಡೆದ 7 ದಿನಗಳ ಒಳಗಾಗಿ ಡಿಪಿ ಅದನ್ನು ಕಾರ್ಯಗತ ಮಾಡಬೇಕು. ಮುಂದೆ, ಇಶೂಯರ್ ಕಂಪನಿ / ಅದರ ಆರ್.ಟಿ.ಎ. ಅವರಿಂದ ಪಡೆದ ಡಿಮ್ಯಾಟ್ ವಿನಂತಿಯನ್ನು ಕಾರ್ಯಗತಗೊಳಿಸಲು 15 ದಿನಗಳವರೆಗೆ[2] ತೆಗೆದುಕೊಳ್ಳಬಹುದು. ಡಿಪಿಯಿಂದ ಇಶೂಯರ್ ಕಂಪೆನಿ / ಆರ್.ಟಿ.ಎ.ಗೆ ದಾಖಲೆಗಳನ್ನು ಕಳಿಸಲು ಬೇಕಾದ ಸಮಯವನ್ನು ಪರಿಗಣಿಸಿ, ಡಿಮೆಟಿರಿಯಲೈಸೇಶನ್ ಸಾಮಾನ್ಯವಾಗಿ 30 ದಿನಗಳನ್ನು ತೆಗೆದುಕೊಳ್ಳುತ್ತದೆ.

6. ನನ್ನ ಹೆಂಡತಿಯೊಂದಿಗೆ ಜಂಟಿಯಾಗಿ ಮಾಲೀಕತ್ವದಲ್ಲಿರುವ ಸೆಕ್ಯುರಿಟೀಸ್ ಮತ್ತು ವೈಯಕ್ತಿಕ ಸೆಕ್ಯುರಿಟೀಸ್ ಡಿಮೆಟಿರಿಯಲೈಸ್ ಮಾಡಲು ನಾನು ಒಂದೇ ಖಾತೆಯನ್ನು ತೆರೆಯಬಹುದೇ?

ಇಲ್ಲ. ಸೆಕ್ಯುರಿಟೀಸ್ ಭೌತಿಕ ರೂಪದಲ್ಲಿ ಹೊಂದಿರುವ ಮಾಲೀಕತ್ವದ ಮಾದರಿಯಲ್ಲೇ ಡಿಮ್ಯಾಟ್ ಖಾತೆಯನ್ನು ತೆರೆಯಬೇಕು. ಉದಾಹರಣೆಗೆ, ಒಂದು ಷೇರು ಪ್ರಮಾಣಪತ್ರವು ನಿಮ್ಮ ಹೆಸರಿನಲ್ಲಿದ್ದರೆ ಮತ್ತು ಇನ್ನೊಂದು ಪ್ರಮಾಣಪತ್ರವು ನಿಮ್ಮ ಹೆಸರಿನೊಂದಿಗೆ ನಿಮ್ಮ ಹೆಂಡತಿಯ ಹೆಸರನ್ನು ಹೊಂದಿದ್ದರೆ, ನೀವು ಎರಡು ಡಿಮ್ಯಾಟ್ ಖಾತೆಗಳನ್ನು ತೆರೆಯಬೇಕಾಗುತ್ತದೆ (ಒಂದು ನಿಮ್ಮ ಹೆಸರಿನಲ್ಲಿ ಮತ್ತು ಇನ್ನೊಂದು ನಿಮ್ಮ ಮತ್ತು ನಿಮ್ಮ ಪತ್ನಿ ಜಂಟಿ ಹೆಸರುಗಳಲ್ಲಿ).

7. ನಾನು ಮಾರಾಟ ಮಾಡಲು ಬಯಸದ ಸೆಕ್ಯುರಿಟೀಸ್ ಡಿಮೆಟಿರಿಯಲೈಸ್ ಮಾಡಬೇಕೇ?

---

[2]ಜೂನ್ 30, 2019 ರವರೆಗೆ ಡಿಮ್ಯಾಟ್ ವಿನಂತಿಯನ್ನು ಪ್ರಕ್ರಿಯೆಗೊಳಿಸಲು ಸೆಬಿ ಆರ್.ಟಿ.ಎ.ಗಳಿಗೆ 30 ದಿನಗಳ ಅವಕಾಶ ಮಾಡಿಕೊಟ್ಟಿದೆ.

1996 ರ ಡಿಪಾಸಿಟರಿಸ್ ಆಕ್ಟ್ ಹೂಡಿಕೆದಾರರಿಗೆ ಭೌತಿಕ ರೂಪದಲ್ಲಿ ಅಥವಾ ಡಿಮ್ಯಾಟ್ ರೂಪದಲ್ಲಿ ಹೊಂದಲು ಒಂದು ಆಯ್ಕೆಯನ್ನು ನೀಡುತ್ತದೆ. ಆದ್ದರಿಂದ, ನೀವು ಸೆಕ್ಯುರಿಟೀಸ್ ಮಾರಲು ಬಯಸದಿದ್ದರೆ, ನೀವು ಅವುಗಳನ್ನು ಡಿಮೆಟಿರಿಯಲೈಸ್ ಮಾಡಬೇಕಾಗಿಲ್ಲ. ಆದಾಗ್ಯೂ, ಡಿಮ್ಯಾಟ್ ರೂಪದಲ್ಲಿ ಸೆಕ್ಯುರಿಟೀಸ್ ಹೊಂದುವುದರಿಂದ ಹಲವಾರು ಪ್ರಯೋಜನಗಳನ್ನು ಪಡೆಯುವುದರಿಂದ ಅದನ್ನು ಹೆಚ್ಚು ಶಿಫಾರಸು ಮಾಡಲಾಗುತ್ತದೆ. ಇದಲ್ಲದೆ, ಭೌತಿಕ ರೂಪದಲ್ಲಿದ್ದರೆ ಪಟ್ಟಿಮಾಡಿದ ಕಂಪೆನಿಗಳಿಗೆ ಮತ್ತು ಪಟ್ಟಿಮಾಡದ ಸಾರ್ವಜನಿಕ ಸೀಮಿತ ಕಂಪೆನಿಗಳಿಗೆ ಸೇರಿದ ಸೆಕ್ಯುರಿಟೀಸ್ ವರ್ಗಾವಣೆಗೆ ಅಸ್ತಿತ್ವದಲ್ಲಿರುವ / ಪ್ರಸ್ತಾವಿತ ನಿರ್ಬಂಧಗಳಿವೆ, ಆದ್ದರಿಂದ ಸೆಕ್ಯುರಿಟೀಸ್ ಡಿಮೆಟಿರಿಯಲೈಸ್ ಮಾಡುವುದು ಉತ್ತಮ.

### 8. ಲಾಕ್-ಇನ್ ಅಡಿಯಲ್ಲಿರುವ ತೆರಿಗೆ ರಹಿತ ಬಾಂಡ್ಗಳಲ್ಲಿ ನನ್ನ ಹೂಡಿಕೆಯನ್ನು ನಾನು ಡಿಮೆಟಿರಿಯಲೈಸ್ ಮಾಡಬಹುದೇ?

ಹೌದು. ಲಾಕ್-ಇನ್ ಅಡಿಯಲ್ಲಿರುವಾಗಲೂ ನಿಮ್ಮ ತೆರಿಗೆ ಮುಕ್ತ ಬಾಂಡ್ಗಳನ್ನು ಡಿಮೆಟಿರಿಯಲೈಸ್ ಮಾಡಬಹುದು. ಷೇರುಗಳ ಡಿಮ್ಯಾಟ್ಗೆ ಅನ್ವಯವಾಗುವ ಪ್ರಕ್ರಿಯೆಯು ಡಿಮ್ಯಾಟ್ಗೆ ಹೋಲುತ್ತದೆ. ನೀವು ಬಾಂಡ್ ಪ್ರಮಾಣಪತ್ರಗಳೊಂದಿಗೆ ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಿದ ಡಿ.ಆರ್.ಎಫ್. ಅನ್ನು ನಿಮ್ಮ ಡಿಪಿಗೆ ಸಲ್ಲಿಸಬೇಕು. ಡಿಪಿಯು ಸಂಬಂಧಿಸಿದ ಇಶೂಯರ್/ ಅದರ ಆರ್.ಟಿ.ಎ.ಗೆ ವಿನಂತಿಯನ್ನು ಕಳಿಸುತ್ತದೆ ಮತ್ತು ದೃಢೀಕರಣದ ಮೇಲೆ, ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಕ್ರೆಡಿಟ್ ಅನ್ನು ಸ್ವೀಕರಿಸಲಾಗುತ್ತದೆ.

### 9. ನಾನು ಸರ್ಕಾರದ ಸೆಕ್ಯುರಿಟೀಸ್ ನೇರವಾಗಿ ಡಿಮ್ಯಾಟ್ ರೂಪದಲ್ಲಿ ಖರೀದಿಸಬಹುದೇ?

ಹೌದು. ಈಗ ಬಾಂಡುಗಳು ಮತ್ತು ಖಜಾನೆ ಬಿಲ್ಲುಗಳು (T- ಬಿಲ್ಸ್) ನಂತಹ ಸರ್ಕಾರಿ ಮಾರುಕಟ್ಟೆಯು ಚಿಲ್ಲರೆ ಹೂಡಿಕೆದಾರರಿಗೆ ಸುಲಭವಾಗಿ ಪಡೆಯಬಹುದು. ವಾಸ್ತವವಾಗಿ, ಆರ್.ಬಿ.ಐ ಚಿಲ್ಲರೆ ಹೂಡಿಕೆದಾರರಿಗೆ ಹೊಸ ಇಶೂಗಳ ಒಂದು ಭಾಗವನ್ನು ಮೀಸಲಿರಿಸುತ್ತದೆ. ನೀವು ಹೊಸ ಸೆಕ್ಯುರಿಟೀಸ್ಗಳ ಹರಾಜಿನಲ್ಲಿ ಪಾಲ್ಗೊಳ್ಳುವುದರ ಮೂಲಕ ಅಥವಾ ಸೆಕೆಂಡರಿ ಮಾರುಕಟ್ಟೆಯಲ್ಲಿ ಈಗಾಗಲೇ ನೀಡಿರುವ ಸೆಕ್ಯುರಿಟೀಸ್ ಖರೀದಿಸುವ ಮೂಲಕ ಜಿ-ಸೆಕ್ ಅಲ್ಲಿ ಹೂಡಿಕೆ ಮಾಡಬಹುದು. ಎರಡಕ್ಕೂ, ನಿಮ್ಮ ಡಿಮ್ಯಾಟ್ ಖಾತೆ ವಿವರಗಳನ್ನು (ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ) ನಮೂದಿಸಿ ಯಾವುದೇ ಅಧಿಕೃತ ಬ್ಯಾಂಕ್ ಅಥವಾ ಪ್ರಾಥಮಿಕ ವ್ಯಾಪಾರಿ ಅಥವಾ ಸ್ಟಾಕ್ ಬ್ರೋಕರ್ ಬಳಿ ಹೋಗಬೇಕು.

### 10. ಡಿಮ್ಯಾಟ್ ರೂಪದಲ್ಲಿ ನಾನು ಸಾವರಿನ್ ಗೋಲ್ಡ್ ಬಾಂಡ್ಗಳಿಗೆ (ಎಸ್.ಜಿ.ಬಿ) ಹೇಗೆ ಚಂದಾದಾರರಾಗಬಹುದು?

ಭೌತಿಕ ರೂಪದಲ್ಲಿ ಚಿನ್ನವನ್ನು ಹೊಂದಲು ಎಸ್.ಜಿ.ಬಿ ಉತ್ತಮ ಆಯ್ಕೆಯನ್ನು ನೀಡುತ್ತದೆ. ಡಿಮ್ಯಾಟ್ ರೂಪದಲ್ಲಿ ಎಸ್.ಜಿ.ಬಿ ಅನ್ನು ಹೊಂದುವ ಆಯ್ಕೆಯು ಇನ್ನು ಉತ್ತಮ ಮತ್ತು ಅನುಕೂಲಕರವಾಗಿರುತ್ತದೆ. ಡಿಮ್ಯಾಟ್ ರೂಪದಲ್ಲಿ ಸಾವರಿನ್ ಗೋಲ್ಡ್ ಬಾಂಡ್ಗಳ ಖರೀದಿ ಅಥವಾ ಚಂದಾದಾರರಾಗುವ ಪ್ರಕ್ರಿಯೆಯು ತುಂಬಾ ಸುಲಭ. ನಿಮ್ಮ ಚಂದಾದಾರಿಕೆಯ ಫಾರಂನಲ್ಲಿ ನಿಮ್ಮ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿಯನ್ನು ನಮೂದಿಸುವುದು ಮಾತ್ರ. ಕೆಲವು ಬ್ಯಾಂಕುಗಳು ಆನ್ಲೈನ್ ಅಪ್ಲಿಕೇಶನ್ ಸೌಲಭ್ಯವನ್ನು ಸಹ ನೀಡುತ್ತವೆ (ಹೂಡಿಕೆದಾರರು ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಿದರೆ ಮತ್ತು ಎಲೆಕ್ಟ್ರಾನಿಕ್ ಪಾವತಿ ಮಾಡಿದ್ದರೆ ಆಗ ಸ್ವಲ್ಪ ಬೆಲೆ ರಿಯಾಯಿತಿ ಕೂಡ ಲಭ್ಯವಿದೆ). ಆರ್.ಬಿ.ಐ.ಯಿಂದ ಹಂಚಿಕೆಯಾದ ನಂತರ, ಅಗತ್ಯವಾದ ಬಾಂಡ್ಗಳು ನಿಮ್ಮ ಡಿಮ್ಯಾಟ್ ಖಾತೆ ಕ್ರೆಡಿಟ್ ಆಗುತ್ತದೆ.

11. ಕಾಗದ ರೂಪದಲ್ಲಿ (ಹೋಲ್ಡಿಂಗ್ ಫಾರಂ ಪ್ರಮಾಣಪತ್ರ) ಹೊಂದಿರುವ ಸಾವರಿನ್ ಗೋಲ್ಡ್ ಬಾಂಡ್ಗಳ (ಎಸ್.ಜಿ.ಬಿ) ನನ್ನ ಹೊಡಿಕೆಗಳನ್ನು ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಬಹುದೇ?

ಹೌದು, ನೀವು ಹಾಗೆ ಮಾಡಬಹುದು. ಇದಕ್ಕಾಗಿ, ನೀವು ಎಸ್.ಜಿ.ಬಿಗಳನ್ನು ಖರೀದಿಸಿದ ಬ್ಯಾಂಕ್ / ಏಜೆಂಟ್ ಅನ್ನು ಸಂಪರ್ಕಿಸಬೇಕು. ಹೋಲ್ಡಿಂಗ್ ಪ್ರಮಾಣಪತ್ರ ರೂಪದಲ್ಲಿ ಇರುವ ಎಸ್.ಜಿ.ಬಿಗಳನ್ನು ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಲು ಅವರು ನಿಮಗೆ ಸಹಾಯ ಮಾಡುತ್ತಾರೆ.

12. ಎನ್.ಎಸ್.ಡಿ.ಎಲ್ ಡಿಪಿಯಲ್ಲಿ ಇರಿಸಲಾಗಿರುವ ನನ್ನ ಡಿಮ್ಯಾಟ್ ಖಾತೆಗೆ ನನ್ನ ಹೊಡಿಕೆ ಎಸ್.ಜಿ.ಎಲ್ ರೂಪದಲ್ಲಿ ಇರುವ ಸರ್ಕಾರಿ ಸೆಕ್ಯುರಿಟೀಸ್ ಪರಿವರ್ತಿಸಬಹುದೇ?

ಹೌದು. ನಿಗದಿತ ರೂಪದಲ್ಲಿ ನೀವು ಸರಿಯಾಗಿ ತುಂಬಿದ ಮತ್ತು ಸಹಿ ಮಾಡಿದ ವಿನಂತಿಯನ್ನು (ಡಿಮೆಟಿರಿಯಲೈಸೇಶನ್ ವಿನಂತಿ ಫಾರಂ - ಸರ್ಕಾರಿ ಸೆಕ್ಯುರಿಟೀಸ್ಗಳು ಎಂದು ಕರೆಯುವ) 'ಟ್ರಾನ್ಸ್ಫರ್ ಫಾರಂ' ಜೊತೆಗೆ ನಿಮ್ಮ ಡಿಪಿಗೆ ಒದಗಿಸಬೇಕು. ನಿಮ್ಮ ಡಿಪಿ ಈ ವಿನಂತಿಯನ್ನು ಎನ್.ಎಸ್.ಡಿ.ಎಲ್.ಗೆ ಕಳುಹಿಸುತ್ತದೆ. ಎನ್.ಎಸ್.ಡಿ.ಎಲ್. ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಅಗತ್ಯ ಕ್ರೆಡಿಟ್ಗೆ ವ್ಯವಸ್ಥೆ ಮಾಡುತ್ತದೆ.

13. ನಾನು ಒಂದೇ ರೀತಿಯ ಹೆಸರಿನೊಂದಿಗೆ ಭೌತಿಕ ಪ್ರಮಾಣಪತ್ರಗಳನ್ನು ಹೊಂದಿದ್ದೇನೆ, ಆದರೆ ಹೆಸರುಗಳ ಅನುಕ್ರಮ ವಿಭಿನ್ನವಾಗಿದೆ. ಕೆಲವು ಪ್ರಮಾಣಪತ್ರಗಳಲ್ಲಿ, ನಾನು ಮೊದಲ ಹೋಲ್ಡರ್ನಾಗಿದ್ದೇನೆ ಮತ್ತು ನನ್ನ ಹೆಂಡತಿ ಎರಡನೇ, ಆದರೆ ಕೆಲವು ಇತರ ಪ್ರಮಾಣಪತ್ರಗಳಲ್ಲಿ, ನನ್ನ ಹೆಂಡತಿ ಮೊದಲ ಹೋಲ್ಡರ್ ಮತ್ತು ನಾನು ಎರಡನೇ ಹೋಲ್ಡರ್ ಆಗಿದ್ದೇನೆ. ಈ ಪ್ರಮಾಣಪತ್ರಗಳ ಡಿಮೆಟಿರಿಯಲೈಸೇಶನ್ಗಾಗಿ ಎರಡು ವಿಭಿನ್ನ ಖಾತೆಗಳನ್ನು ನಾನು ತೆರೆಯಬೇಕೇ?

ಜಂಟಿ ಹೋಲ್ಡರ್ ಕಂಪನಿಗೆ ಲಿಖಿತ ವಿನಂತಿಯನ್ನು ನೀಡುವ ಮೂಲಕ ಹೆಸರುಗಳ ಅನುಕ್ರಮವನ್ನು ಬದಲಾಯಿಸಲು ಅರ್ಹರಾಗಿರುತ್ತಾರೆ. ಇದು ವರ್ಗಾವಣೆ ಅಲ್ಲ. ಜಂಟಿ ಹೋಲ್ಡರ್ ಅನುಕ್ರಮವನ್ನು ಬದಲಾಯಿಸುವುದನ್ನು 'ಟ್ರಾನ್ಸ್ ಪೊಸಿಷನ್' ಎಂದು ಕರೆಯಲಾಗುತ್ತದೆ. ಹೇಗಾದರೂ, ಒಂದು ಫೋಲಿಯೊದಲ್ಲಿ ಸಂಪೂರ್ಣ ಹೋಲ್ಡಿಂಗ್ಗಳಿಗಾಗಿ 'ಟ್ರಾನ್ಸ್-ಪೊಸಿಷನ್ ಸೌಲಭ್ಯವನ್ನು ಪಡೆದುಕೊಳ್ಳಬಹುದು ಮತ್ತು ಹೋಲ್ಡಿಂಗ್ಗಳ ಭಾಗಕ್ಕೆ ಅನುಮತಿಸುವುದಿಲ್ಲ.

ಒಂದೇ ಗುಂಪಿನ ಜಂಟಿ ಹೋಲ್ಡರ್ ಸೆಕ್ಯುರಿಟೀಸ್ ವಿವಿಧ ಅನುಕ್ರಮ ಹೆಸರುಗಳಲ್ಲಿ ಹೊಂದಿದ್ದರೆ, ಅಂತಹ ಸೆಕ್ಯುರಿಟೀಸ್ ಡಿಮೆಟಿರಿಯಲೈಸೇಶನ್ಗಾಗಿ ಬಹು ಡಿಮ್ಯಾಟ್ ಖಾತೆಗಳನ್ನು ತೆರೆಯುವ ಅಗತ್ಯವಿಲ್ಲ. 'ಟ್ರಾನ್ಸ್-ಪೊಸಿಷನ್ ಕಮ್ ಡಿಮ್ಯಾಟ್ ಸೌಲಭ್ಯ' ಅಂತಹ ಸೆಕ್ಯುರಿಟೀಸ್ ವಿವಿಧ ಸಂಯೋಜನೆಗಳಲ್ಲಿ ಪ್ರಮಾಣಪತ್ರಗಳನ್ನು ಬಳಸಿಕೊಂಡಿದ್ದರೆ, ಒಂದು ಡಿಮ್ಯಾಟ್ ಖಾತೆಯಲ್ಲಿ ಡಿಮೆಟಿರಿಯಲೈಸ್ ಮಾಡಬಹುದು. ಇದಕ್ಕಾಗಿ, ಡಿಮೆಟಿರಿಯಲೈಸೇಶನ್ ವಿನಂತಿ ಫಾರಂ (ಡಿ.ಆರ್.ಎಫ್) ಮತ್ತು 'ಟ್ರಾನ್ಸ್-ಪೊಸಿಷನ್ ಕಮ್ ಡಿಮ್ಯಾಟ್ ಫಾರಂ' ಎಂಬ 'ಮತ್ತೊಂದು ಫಾರಂ ಅನ್ನು ಡಿಪಿಗೆ ಸಲ್ಲಿಸಬೇಕು. ಇದನ್ನು ಚಿತ್ರ ಸಂಖ್ಯೆ 5 ರಲ್ಲಿ ವಿವರಿಸಲಾಗಿದೆ -

| ಟ್ರಾನ್ಸ್-ಪೊಸಿಷನ್ ಕಮ್ ಡಿಮ್ಯಾಟ್ ಸೌಲಭ್ಯ |
|---|

| ಹೆಸರಿನಲ್ಲಿ | ಷೇರು ಪ್ರಮಾಣಪತ್ರ | ಡಿಮ್ಯಾಟ್ ಖಾತೆ |
|---|---|---|
| ಇಬ್ಬರು ಹೋಲ್ಡರ್ | ಎ ಮತ್ತು ಬಿ<br>ಅಥವಾ<br>ಬಿ ಮತ್ತು ಎ | ಎ ಮತ್ತು ಬಿ |
| ಮೂವರು ಹೋಲ್ಡರ್ | ಎ, ಬಿ, ಸಿ<br>ಅಥವಾ ಎ, ಸಿ, ಬಿ<br>ಅಥವಾ ಬಿ, ಎ, ಸಿ<br>ಅಥವಾ ಬಿ, ಸಿ, ಎ<br>ಅಥವಾ ಸಿ, ಎ, ಬಿ<br>ಅಥವಾ ಸಿ, ಬಿ, ಎ | ಎ, ಬಿ ಮತ್ತು ಸಿ |

ನಿಮ್ಮ ಡಿಪಿಗೆ ಡಿಮ್ಯಾಟ್ ವಿನಂತಿ ಫಾರಂ(ಡಿ.ಆರ್.ಎಫ್) ಜೊತೆಗೆ ಟ್ರಾನ್ಸ್-ಪೊಸಿಷನ್ ಫಾರಂ ಅನ್ನು (ಡಿ.ಆರ್.ಎಫ್) ಸಲ್ಲಿಸಿ.

ಚಿತ್ರ 5

## ಸೆಕ್ಯುರಿಟೀಸ್ಗಳ ರಿಮೆಟಿರಿಯಲೈಸೇಶನ್

1. ನನ್ನ ಎಲೆಕ್ಟ್ರಾನಿಕ್ ಹಿಡುವಳಿಗಳನ್ನು ಕಾಗದ ಪ್ರಮಾಣಪತ್ರಗಳಾಗಿ ಮರುಪರಿವರ್ತಿಸಬಹುದೇ?

ಹೌದು. ನಿಮ್ಮ ಸೆಕ್ಯುರಿಟೀಸ್ಗಳನ್ನು ಭೌತಿಕ ರೂಪದಲ್ಲಿ ಹಿಂತಿರುಗಿಸಲು ಬಯಸಿದರೆ, ನಿಮ್ಮ ಡಿಪಿಯಲ್ಲಿ ಸೂಚಿಸಲಾದ ನಿಗದಿತ ನಮೂನೆಯಲ್ಲಿ 'ರಿಮೆಟೀರಿಯಲೈಸೇಶನ್ ವಿನಂತಿ ಫಾರಂ' ಅನ್ನು ನೀವು ಸಲ್ಲಿಸಬೇಕು. ಅಗತ್ಯವಾದ ಪರಿಶೀಲನೆಯ ನಂತರ, ನಿಮ್ಮ ಡಿಪಿಯು ನಿಮ್ಮ ವಿನಂತಿಯನ್ನು ಎನ್ಎಸ್ಡಿಎಲ್ನ ಡಿಪಾಸಿಟರಿ ಸಿಸ್ಟಮ್ ಮೂಲಕ ಸಂಬಂಧಿತ ಇಶೂಯರ್ ಕಂಪನಿ / ಆರ್.ಟಿ.ಎ.ಗೆ ಕಳೆಸುತ್ತದೆ. ಕಂಪನಿ / ಆರ್.ಟಿ.ಎ. ಪ್ರಮಾಣಪತ್ರಗಳನ್ನು ಮುದ್ರಿಸಿ ಅದನ್ನು ನೇರವಾಗಿ ನಿಮಗೆ ರವಾನಿಸುತ್ತದೆ. ವಿನಂತಿಯನ್ನು ಸಲ್ಲಿಸುವ ಮೊದಲು ನಿಮ್ಮ ಡಿಪಿಯೊಂದಿಗೆ ರಿಮೆಟಿರಿಯಲೈಸೇಶನ್ ಶುಲ್ಕಗಳನ್ನು ಪರಿಶೀಲಿಸಬೇಕು.

## ಮಾರುಕಟ್ಟೆ ವ್ಯಾಪಾರಗಳ ಸೆಟಲ್ಮೆಂಟ್ ಮತ್ತು ಸೆಕ್ಯುರಿಟೀಸ್ಗಳ ವರ್ಗಾವಣೆ

1. ಡಿಮೆಟಿರಿಯಲೈಸ್ಡ್ ಸೆಕ್ಯುರಿಟೀಸ್ ಅನ್ನು ಮಾರಾಟ ಮಾಡುವ ಪ್ರಕ್ರಿಯೆ ಏನು?

ಕೆಳಗೆ ನೀಡಿರುವಂತೆ ಡಿಮೆಟಿರಿಯಲೈಸ್ಡ್ ಸೆಕ್ಯುರಿಟೀಸ್ ಅನ್ನು ಮಾರಾಟ ಮಾಡುವ ಪ್ರಕ್ರಿಯೆಯು ತುಂಬಾ ಸರಳವಾಗಿದೆ -

ಎ. ನಿಮ್ಮ ಸ್ಟಾಕ್ ಬ್ರೋಕರ್ಗೆ ಮಾರಾಟ ಸೂಚನೆಯನ್ನು ನೀಡಬೇಕು.

ಬಿ. ನಿಮ್ಮ ಮಾರಾಟ ಆದೇಶವನ್ನು ಕಾರ್ಯಗತಗೊಳಿಸಿದ ನಂತರ ಮತ್ತು ಆದೇಶ ಕಾರ್ಯಗತಗೊಂಡ ದೃಢೀಕರಣವನ್ನು ನೀವು ಸ್ವೀಕರಿಸಿದಲ್ಲಿ, ನಿಮ್ಮ ಪಾವತಿಸುವ ಬಾಧ್ಯತೆಯನ್ನು ಪೂರೈಸಲು ನಿಮ್ಮ ಸ್ಟಾಕ್ ಬ್ರೋಕರ್ಗೆ ಮಾರಾಟ ಮಾಡಿದ ಸೆಕ್ಯುರಿಟೀಸ್ ಅನ್ನು ನೀಡಬೇಕು. ಈ ಉದ್ದೇಶಕ್ಕಾಗಿ, ನಿಮ್ಮ ಡಿಪಿಯಿಂದ ಸೂಚಿಸಲಾದ ಸಮಯದ ಒಳಗೆ ಸರಿಯಾಗಿ ತುಂಬಿದ 'ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್' ಅನ್ನು ಡಿಪಿಗೆ ಸಲ್ಲಿಸಬೇಕು.

ಸಿ. ನಿಮ್ಮ ಬ್ರೋಕರ್ನ ಕ್ಲಿಯರಿಂಗ್ ಖಾತೆಯನ್ನು ಕ್ರೆಡಿಟ್ ಮಾಡಿ,ನೀವು ಮಾರಾಟ ಮಾಡಿದ ಸೆಕ್ಯುರಿಟೀಸ್ಗಳನ್ನು ನಿಮ್ಮ ಖಾತೆಗೆ ಡೆಬಿಟ್ ಮಾಡಲು ಡಿಐಎಸ್ ಅಲ್ಲಿ ನಿಮ್ಮ ಡಿಪಿಗೆ ಸೂಚನೆ ಹೊಂದಿರಬೇಕು. ಪರ್ಯಾಯವಾಗಿ, ಎನ್.ಸ್.ಡಿ.ಎಲ್ ಸ್ಪೀಡ್ -ಇ ಸೇವೆಯನ್ನು ಎಲೆಕ್ಟ್ರಾನಿಕ್ ಆನ್ಲೈನ್ ಸೂಚನೆ ನೀಡಲು ಬಳಸಬಹುದು.

ಡಿ. ನಿಮ್ಮ ಡಿಪಿಯಿಂದ ಸೂಚನೆಯು ಯಶಸ್ವಿಯಾಗಿ ಕಾರ್ಯಗತಗೊಂಡ ನಂತರ, ನಿಮ್ಮ ಬ್ರೋಕರ್ ಷೇರುಗಳನ್ನು ಪಡೆಯುತ್ತಾನೆ ಮತ್ತು ಕ್ಲಿಯರಿಂಗ್ ಕಾರ್ಪೋರೇಶನ್ಗೆ ಸೆಕ್ಯುರಿಟೀಸ್ ಪೇ-ಇನ್ ಅನ್ನು ವ್ಯವಸ್ಥೆಗೊಳಿಸುತ್ತದೆ.

ಇ. ಕ್ಲಿಯರಿಂಗ್ ಕಾರ್ಪೋರೇಶನ್ನಿಂದ ಪೇ-ಔಟ್ (ಹಣ) ಪಾವತಿಸಿದ ನಂತರ, ನಿಮ್ಮ ಬ್ರೋಕರ್ ನಿಮ್ಮ ಲಿಂಕ್ ಬ್ಯಾಂಕ್ ಖಾತೆಗೆ ಮಾರಾಟದ ಆದಾಯದ ಕ್ರೆಡಿಟ್ ಅನ್ನು ವ್ಯವಸ್ಥೆಗೊಳಿಸುತ್ತದೆ.

## 2. ಡಿಮ್ಯಾಟ್ ರೂಪದಲ್ಲಿ ನಾನು ಸೆಕ್ಯುರಿಟೀಸ್ ಅನ್ನು ಹೇಗೆ ಖರೀದಿಸಬಹುದು?

ಕೆಳಗೆ ನೀಡಿರುವಂತೆ ಡಿಮ್ಯಾಟ್ ರೂಪದಲ್ಲಿ ಸೆಕ್ಯುರಿಟೀಸ್ ಅನ್ನು ಖರೀದಿಸುವ ಪ್ರಕ್ರಿಯೆಯು ತುಂಬಾ ಸರಳವಾಗಿದೆ -

ಎ. ನಿಮ್ಮ ಸ್ಟಾಕ್ ಬ್ರೋಕರ್ಗೆ ನೀವು ಖರೀದಿಯ ಸೂಚನೆಯನ್ನು ನೀಡಬೇಕಾಗಿದೆ.

ಬಿ. ನಿಮ್ಮ ಖರೀದಿಯ ಆದೇಶವನ್ನು ಕಾರ್ಯಗತಗೊಳಿಸಿದ ನಂತರ ಮತ್ತು ಆದೇಶ ಕಾರ್ಯಗತಗೊಂಡ ದೃಢೀಕರಣವನ್ನು ನೀವು ಸ್ವೀಕರಿಸಿದಲ್ಲಿ, ನಿಮ್ಮ ಪಾವತಿಸುವ ಬಾಧ್ಯತೆಯನ್ನು ಪೂರೈಸಲು ನಿಮ್ಮ ಸ್ಟಾಕ್ ಬ್ರೋಕರ್ಗೆ ಬಾಕಿ ಹಣವನ್ನು ನೀಡಬೇಕು.

ಸಿ. ನಿಮ್ಮ ಬ್ರೋಕರ್ ಸೆಕ್ಯುರಿಟೀಸ್ ಕ್ರೆಡಿಟ್ ಅನ್ನು (ಸೆಕ್ಯುರಿಟೀಸ್) ಪೇ-ಔಟ್ ದಿನದಂದು ಅದರ ಕ್ಲಿಯರಿಂಗ್ ಖಾತೆಯಲ್ಲಿ ಪಡೆಯುತ್ತದೆ.

ಡಿ. ನೀವು ಖರೀದಿಸಿದ ಸೆಕ್ಯುರಿಟೀಸ್ ನಿಮ್ಮ ಡಿಮ್ಯಾಟ್ ಖಾತೆಯನ್ನು ಕ್ರೆಡಿಟ್ ನೀಡಿ ಮತ್ತು ನಿಮ್ಮ ಬ್ರೋಕರ್ ಕ್ಲಿಯರಿಂಗ್ ಖಾತೆಯನ್ನು ಡೆಬಿಟ್ ಮಾಡಲು ತನ್ನ ಡಿಪಿಗೆ ಸೂಚನೆ ನೀಡುತ್ತಾರೆ.

.ಇ. ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ನೀವು ಸ್ಟ್ಯಾಂಡಿಂಗ್ ಇನ್ಸ್ಟ್ರಕ್ಷನ್ ನೀಡದಿದ್ದರೆ, ನೀವು ಕ್ರೆಡಿಟ್ ಪಡೆಯುವುದಕ್ಕಾಗಿ ನಿಮ್ಮ ಡಿಪಿಗೆ 'ರಸೀದಿಯ ಸೂಚನೆ' ನೀಡಬೇಕಾಗುತ್ತದೆ.

ಎಫ್. ಪುಸ್ತಕ ಮುಚ್ಚುವ ಮೊದಲು, ನಿಮ್ಮ ಬ್ರೋಕರ್ ಸೆಕ್ಯುರಿಟೀಸ್ ನಿಮ್ಮ ಖಾತೆಗೆ ವರ್ಗಾವಣೆ ಮಾಡಿದ್ದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಸೆಕ್ಯುರಿಟೀಸ್ ನಿಮ್ಮ ಬ್ರೋಕರ್ನ ಖಾತೆಯಲ್ಲಿಯೇ ಇದ್ದರೆ, ಕಂಪನಿಯು ಬ್ರೋಕರ್ಗೆ ಕಾರ್ಪೋರೇಟ್

ಲಾಭಗಳನ್ನು (ಡಿವಿಡೆಂಡ್, ಬೋನಸ್ ಮುಂತಾದವು) ನೀಡುತ್ತದೆ. ಆ ಸಂದರ್ಭದಲ್ಲಿ, ನಿಮ್ಮ ಬ್ರೋಕರ್‌ನಿಂದ ನೀವು ಲಾಭಗಳನ್ನು ಪಡೆಯಬೇಕು.

3. 'ಮಾರುಕಟ್ಟೆ ವ್ಯಾಪಾರ' ಮತ್ತು 'ಆಫ್ ಮಾರುಕಟ್ಟೆ ವ್ಯಾಪಾರ' ಎಂದರೇನು?

ಕ್ಲಿಯರಿಂಗ್ ಕಾರ್ಪೋರೇಶನ್ ಮೂಲಕ ಸೆಟಲ್ಮೆಂಟ್ಗೊಳ್ಳುವ ಯಾವುದೇ ವ್ಯಾಪಾರವನ್ನು ' ಮಾರುಕಟ್ಟೆ ವ್ಯಾಪಾರ' ಎಂದು ಕರೆಯಲಾಗುತ್ತದೆ. ಮಾನ್ಯತೆ ಪಡೆದ ಷೇರು ವಿನಿಮಯ ಕೇಂದ್ರದ ವೇದಿಕೆಯ ಮೇಲೆ ಸ್ಟಾಕ್ ಬ್ರೋಕರ್ಗಳ ಮೂಲಕ ಈ ವಹಿವಾಟುಗಳನ್ನು ಮಾಡಲಾಗುತ್ತದೆ. ಕ್ಲಿಯರಿಂಗ್ ಕಾರ್ಪೋರೇಶನ್ ಒಳಗೊಳ್ಳದೆ, ಎರಡೂ ಪಕ್ಷಗಳ ನಡುವೆ ನೇರವಾಗಿ ಸೆಟಲ್ಮೆಂಟ್ಗೊಳ್ಳುವ ವ್ಯಾಪಾರವನ್ನು 'ಆಫ್ ಮಾರುಕಟ್ಟೆ ವ್ಯಾಪಾರ' ಎಂದು ಕರೆಯಲಾಗುತ್ತದೆ.

4. 'ಇಂಟರ್ ಡಿಪಾಸಿಟರಿ ವರ್ಗಾವಣೆ' ಎಂದರೇನು? ಯಾವುದೇ ಐಎಸ್ಐಎನ್ ಅನ್ನು ಇತರ ಡಿಪಾಸಿಟರಿಗೆ ವರ್ಗಾಯಿಸಲು ಸಾಧ್ಯವೇ?

ಒಂದು ಡಿಪಾಸಿಟರಿಯೊಂದಿಗೆ ಇರುವ ಡಿಮ್ಯಾಟ್ ಖಾತೆಯಿಂದ ಬೇರೆ ಡಿಪಾಸಿಟರಿಯೊಂದಿಗೆ ಇರುವ ಮತ್ತೊಂದು ಡಿಮ್ಯಾಟ್ ಖಾತೆಗೆ ಸೆಕ್ಯುರಿಟೀಸ್ ವರ್ಗಾವಣೆಯನ್ನು 'ಇಂಟರ್ ಡಿಪಾಸಿಟರಿ ವರ್ಗಾವಣೆ' (ಐಡಿಟಿ) ಎಂದು ಕರೆಯಲಾಗುತ್ತದೆ. ಇವುಗಳು ಎರಡೂ ಡಿಪಾಸಿಟರಿಗಳಲ್ಲಿ ಸಕ್ರಿಯವಾಗಿರುವ ಐಎಸ್ಐಎನ್ ಐಡಿಟಿ ಸಾಧ್ಯ.

5. ಭಾಗಶಃ ಖಾತೆ ವರ್ಗಾವಣೆ ಎಂದರೇನು?

ಒಂದು ವೇಳೆ ಸೂಚನೆಯ ಸೆಟಲ್ಮೆಂಟ್ ಸಮಯದಲ್ಲಿ ಡಿಮ್ಯಾಟ್ ಖಾತೆಯಲ್ಲಿ ಲಭ್ಯವಿರುವ ಪ್ರಮಾಣಕ್ಕಿಂತ ಹೆಚ್ಚಾದ ಪ್ರಮಾಣಕ್ಕೆ ನೀವು ಪಾವತಿಸುವ ಸೂಚನೆಯನ್ನು ನೀಡಿದರೆ, ನಂತರ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಲಭ್ಯವಿರುವ ಬ್ಯಾಲೆನ್ಸ್ ತನಕ ಡೆಬಿಟ್ ವಿತರಿಸಲಾಗುತ್ತದೆ. ಆಫ್ ಮಾರುಕಟ್ಟೆ ವರ್ಗಾವಣೆಯ ಸಂದರ್ಭದಲ್ಲಿ, ಸಾಕಷ್ಟು ಬ್ಯಾಲೆನ್ಸ್ ಲಭ್ಯವಿಲ್ಲದಿದ್ದರೆ ಇಡೀ ಸೂಚನೆಯು ವಿಫಲಗೊಳ್ಳುತ್ತದೆ, ಅಂದರೆ ಡೆಬಿಟ್ ನಡೆಯುವುದಿಲ್ಲ.

6. ಮಾರುಕಟ್ಟೆ ಪ್ರಕಾರ ಮತ್ತು ಸೆಟಲ್ಮೆಂಟ್ ಸಂಖ್ಯೆ ಏನು?

ಪ್ರತಿ ಷೇರು ವಿನಿಮಯ ಕೇಂದ್ರದಲ್ಲಿ, ವಿಭಿನ್ನ ವಹಿವಾಟು ಕಿಟಕಿಗಳಲ್ಲಿ ವಿವಿಧ ವ್ಯವಹಾರಗಳು ನಡೆಯುತ್ತವೆ. ಈ ಕಿಟಕಿಗಳನ್ನು ಮಾರುಕಟ್ಟೆಯ ಪ್ರಕಾರ ಮತ್ತು ಒಂದು ಸೆಟಲ್ಮೆಂಟ್ ಸಂಖ್ಯೆಯ ವಿಶಿಷ್ಟ ಸಂಯೋಜನೆಯಿಂದ ಗುರುತಿಸಲಾಗುತ್ತದೆ. ಪಾವತಿಯ ಬಾಧ್ಯತೆಗಳನ್ನು ಸರಿಯಾಗಿ ಪಡೆಯಲು ಡೆಲಿವರಿ ಸೂಚನಾ ಸ್ಲಿಪ್ನಲ್ಲಿ ನೀವು ಸರಿಯಾದ ಮಾರುಕಟ್ಟೆ ಪ್ರಕಾರ ಮತ್ತು ಸೆಟಲ್ಮೆಂಟ್ ಸಂಖ್ಯೆಯನ್ನು (ಒಟ್ಟಿಗೆ ಡಿಪಾಸಿಟರಿ ಸಿಸ್ಟಮ್ನಲ್ಲಿ ಸೆಟಲ್ಮೆಂಟ್ ವಿವರಗಳು ಎಂದು ಹೇಳಲಾಗುತ್ತದೆ) ನಮೂದಿಸವುದು ಮುಖ್ಯ. ಈ ವಿವರಗಳನ್ನು ಬ್ರೋಕರ್ ನೀಡಿದ ಒಪ್ಪಂದ ಪತ್ರದಲ್ಲಿ ಕಾಣಬಹುದು.

7. ಟಿ + 2 ರೋಲಿಂಗ್ ಸೆಟಲ್ಮೆಂಟ್ ಚಕ್ರ ಎಂದರೇನು?

ಟಿ+2 ರೋಲಿಂಗ್ ಸೆಟಲ್ಮೆಂಟ್ ವ್ಯವಸ್ಥೆ ಅಡಿಯಲ್ಲಿ, ದಿನ 1 (ಟಿ) ರಂದು ವಿನಿಮಯ ಕಚೇರಿಯಲ್ಲಿ ನಡೆಯುವ ವ್ಯಾಪಾರಗಳು (ಖರೀದಿ ಮತ್ತು ಮಾರಾಟ) ಸಂಬಂಧಪಟ್ಟ ಕ್ಲಿಯರಿಂಗ್ ಕಾರ್ಪೋರೇಶನ್ ಇಂದ ಎರಡು ದಿನಗಳ ನಂತರ

ಇತ್ಯರ್ಥಗೊಳ್ಳುತ್ತದೆ, ಅಂದರೆ ದಿನ 3 (ಟಿ + 2) ಎಂದು ಅರ್ಥ. ಉದಾಹರಣೆಗೆ, ಸೋಮವಾರ ಕೈಗೊಳ್ಳಲಾದ ವಹಿವಾಟುಗಳು ಬುಧವಾರ (ಎಲ್ಲಾ ದಿನಗಳು ಕೆಲಸದ ದಿನ ಎಂದು ಊಹಿಸಲಾಗಿದೆ). ಅಂತೆಯೇ, ಮಂಗಳವಾರ ಕೈಗೊಂಡ ಎಲ್ಲಾ ವಹಿವಾಟುಗಳು ಗುರುವಾರ, ಹೀಗೆ ಮುಂದುವರೆಯುತ್ತದೆ. ಈ ವಿಧದ ಸೆಟಲ್ಮೆಂಟ್ ವ್ಯವಸ್ಥೆಯನ್ನು ಟಿ + 2 ರೋಲಿಂಗ್ ಸೆಟಲ್ಮೆಂಟ್ ಎಂದು ಕರೆಯಲಾಗುತ್ತದೆ.

ಸೆಕ್ಯುರಿಟೀಸ್ ಪೇ-ಇನ್ ಮತ್ತು ಪೇ-ಔಟ್ ಹಾಗೂ ಹಾಗೂ ಪ್ರತಿ ಸೆಟಲ್ಮೆಂಟ್ ಹಣಕ್ಕೆ ಕ್ಲಿಯರಿಂಗ್ ಕಾರ್ಪೋರೇಶನ್ ಸಮಯಾವಧಿಯನ್ನು ಸೂಚಿಸುತ್ತದೆ. ಸ್ಟಾಕ್ ಬ್ರೋಕರ್‌ಗಳು ಅದನ್ನು ಅನುಸರಿಸಬೇಕು. ಅವುಗಳನ್ನು ಹಾಗೆ ಮಾಡಲು, ಡಿಪಿಗಳು ಮಾರಾಟ ವ್ಯಾಪಾರ ಮಾಡುವ ಗ್ರಾಹಕರಿಗೆ ಸೆಕ್ಯುರಿಟೀಸ್ ಪೇ-ಇನ್ ಮಾಡಲು ಸಮಯಾವಧಿಯನ್ನು ಸೂಚಿಸುತ್ತಾರೆ (ಹಣದ ಸೆಟಲ್ಮೆಂಟ್ ಬ್ಯಾಂಕುಗಳ ಮೂಲಕ ಸಂಭವಿಸುತ್ತದೆ ಆದ್ದರಿಂದ, ಡಿಪಾಸಿಟರಿ ಸಿಸ್ಟಮ್ನಿಂದ ಹೊರವಿದೆ).

## 8. ಟಿ + 2 ರೋಲಿಂಗ್ ಸೆಟಲ್ಮೆಂಟ್ ಚಕ್ರದಲ್ಲಿ, ನಾನು ಸೋಮವಾರ ನನ್ನ ಬ್ರೋಕರ್ / ಅಧಿಕೃತ ವ್ಯಕ್ತಿಯ ಮೂಲಕ ಷೇರುಗಳನ್ನು ಮಾರಾಟ ಮಾಡಿದರೆ, ನನ್ನ ಡಿಪಿಗೆ ಡೆಲಿವರಿ ಇನ್ಸ್ಟ್ರಕ್ಷನ್ ಯಾವಾಗ ನೀಡಬೇಕು?

ವ್ಯಾಪಾರವು ಸೋಮವಾರ ನಡೆಯುತ್ತಿದ್ದಂತೆ, ಸೆಕ್ಯುರಿಟೀಸ್ ಪೇ-ಇನ್ ಬುಧವಾರ ನಡೆಯುತ್ತದೆ, ಅಂದರೆ ಬುಧವಾರ ಕ್ಲಿಯರಿಂಗ್ ಕಾರ್ಪೋರೇಶನ್ ನಿಗದಿಪಡಿಸುವ ಸಮಯದ ಮೊದಲು ನಿಮ್ಮ ಬ್ರೋಕರ್ ಸೆಕ್ಯುರಿಟೀಸ್ ಪಡೆಯಬೇಕು. ನಿಮ್ಮ ಡಿಪಿಗೆ ನೀವು ನೀಡಿದ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ ಅನ್ನು ಪ್ರಕ್ರಿಯೆಗೊಳಿಸಲು ಕೆಲವು ಸಮಯ ಬೇಕಾದಾಗ, ಇದು ಪಾವತಿ-ಸಂಬಂಧಿತ ಸೂಚನೆಗಳನ್ನು ಸಲ್ಲಿಸುವ ಕೆಲವು ಸಮಯಸೂಚಿಯನ್ನು (ವಿಶಿಷ್ಟವಾಗಿ ಪೇ-ಇನ್ ದಿನದ ಹಿಂದಿನ ದಿನ) ಸೂಚಿಸುತ್ತದೆ. ನೀಡಿರುವ ಸಮಯ ಮತ್ತು ದಿನಕ್ಕೂ ಮೊದಲು ನಿಮ್ಮ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ ನಿಮ್ಮ ಡಿಪಿಯನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಬೇಕು. ಆದ್ದರಿಂದ ನಿಮ್ಮ ಬ್ರೋಕರ್‌ನಿಂದ ನಿಮ್ಮ ಮಾರಾಟದ ಆರ್ಡರ್ ದೃಢೀಕರಿಸಿದ ತಕ್ಷಣವೇ ನಿಮ್ಮ ಡಿಪಿಗೆ ನಿಮ್ಮ ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ ಅನ್ನು ಸಲ್ಲಿಸುವುದು ಉತ್ತಮ.

## 9. ಪಾವತಿಗಾಗಿ ಸೂಚನಾ ಸ್ಲಿಪ್ಗಳನ್ನು ಸಲ್ಲಿಸಲು ನಿಗದಿ ಮಾಡಿದ ಸಮಯದ ಬಗ್ಗೆ ನಾನು ಹೇಗೆ ತಿಳಿಯುವುದು?

ನಿಮ್ಮ ಡಿಪಿಯು ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ಗಳನ್ನು ಸಲ್ಲಿಸಲು ನೀವು ಅನುಸರಿಸಬೇಕಾದ ಸಮಯಾವಧಿಗಳನ್ನು ನಿಗದಿ ಮಾಡಿ ನಿಮಗೆ ಸೂಚಿಸುತ್ತದೆ. ಇವುಗಳು ಸಾಮಾನ್ಯವಾಗಿ ನಿಮ್ಮ ಮಾಹಿತಿಗಾಗಿ ಡಿಪಿ ನೀಡಿದ ಡಿಐಎಸ್ ಬುಕ್ಲೆಟ್ನಲ್ಲಿ ಮುದ್ರಿಸಲ್ಪಡುತ್ತವೆ.

## 10. ನಾನು ಷೇರುಗಳನ್ನು ಖರೀದಿಸಿದಾಗ, ನನ್ನ ಬ್ರೋಕರ್‌ನಿಂದ ಎಷ್ಟು ಸಮಯದಲ್ಲಿ ನಾನು ಸೆಕ್ಯುರಿಟೀಸ್ ಅನ್ನು ಪಡೆಯಬೇಕು?

ನೀವು ಬ್ರೋಕರ್‌ಗೆ ಅಗತ್ಯವಾದ ಪಾವತಿಯನ್ನು ಮಾಡಿದರೆ, ಅದರ ಕ್ಲಿಯರಿಂಗ್ ಸದಸ್ಯ ಖಾತೆಯಲ್ಲಿ ಸೆಕ್ಯುರಿಟೀಸ್ ಪಡೆದ ನಂತರ, ಒಂದು ಕೆಲಸದ ದಿನದಲ್ಲಿಯೇ ಬ್ರೋಕರ್ ನಿಮಗೆ ಸೆಕ್ಯುರಿಟೀಸ್ ಅಗತ್ಯವಾಗಿ ವರ್ಗಾಯಿಸಬೇಕು.

## 11. ಡಿಪಿಯಿಂದ ‘ಅಟ್ ಕ್ಲೈಂಟ್’ಸ್ ರಿಸ್ಕ್’ ಆಧಾರದ ಮೇಲೆ ಇನ್ಸ್ಟ್ರಕ್ಷನ್ ಸ್ಲಿಪ್ ಅನ್ನು ಸ್ವೀಕರಿಸುವುದು ಎಂದರೇನು ಮತ್ತು ಅದರ ಪ್ರಾಮುಖ್ಯತೆ ಏನು?

ಪ್ರತಿ ಡಿಪಿಯು ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ಗಳನ್ನು ಸಲ್ಲಿಸಲು ಕೆಲವು ಸಮಯಾವಧಿಗಳನ್ನು ಸೂಚಿಸುತ್ತದೆ. ನಿಮ್ಮ ಇನ್ಸ್ಟ್ರಕ್ಷನ್ ಸ್ಲಿಪ್ ಅಂತಹ ಗಡುವು ಸಮಯದ ನಂತರ ನಿಮ್ಮ ಡಿಪಿಯನ್ನು ತಲುಪಿದಲ್ಲಿ, ಡಿಪಾಸಿಟರಿ ಸಿಸ್ಟಮ್ನಲ್ಲಿ ನಿರ್ವಹಣೆಹೊಳಿಸಲು ಸೀಮಿತ ಹೊಣೆಗಾರಿಕೆಯಲ್ಲಿ ನಿಮ್ಮ ಡಿಪಿ ಅದನ್ನು ಸ್ವೀಕರಿಸಬಹುದು.

ಅಂತಹ ಸಂದರ್ಭಗಳಲ್ಲಿ, ಡಿಪಿಗಳು 'ತಡವಾಗಿ ಪಡೆದ, ಉತ್ತಮ ಪ್ರಯತ್ನಗಳಿಗೆ ಒಳಪಟ್ಟಿರುತ್ತದೆ' ಅಥವಾ 'ತಡವಾಗಿ, ಕ್ಲೈಂಟ್’ಸ್ ರಿಸ್ಕ್ ಅಡಿಯಲ್ಲಿ ಸ್ವೀಕರಿಸಲಾಗಿದೆ' ಎಂಬುವ ರೀತಿಯ ವಿವರಣೆ ಹೊಂದಿರುವ ಸ್ಟಾಂಪ್ ಇನ್ಸ್ಟ್ರಕ್ಷನ್ ಸ್ಲಿಪ್ ಮೇಲೆ (ಕ್ಲೈಂಟ್ ಪ್ರತಿ ಮತ್ತು ಕಚೇರಿ ಪ್ರತಿ) ಗುರುತಿಸುತ್ತಾರೆ. ಕೆಲವು ಕಾರಣಕ್ಕಾಗಿ, ಡಿಪಿಯು ಡಿಪಾಸಿಟರಿ ಸಿಸ್ಟಮ್ನಲ್ಲಿ ತಡವಾಗಿ ಸ್ವೀಕರಿಸಿದ ಇನ್ಸ್ಟ್ರಕ್ಷನ್ಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲವಾದರೆ, ಅಂದರೆ ಆರ್ಥಿಕ ನಷ್ಟದೊಂದಿಗೆ (ಹರಾಜು ಶುಲ್ಕಗಳು ಇತ್ಯಾದಿ)ಗ್ರಾಹಕರು ತಾನು ಪೇ-ಇನ್ ಹಣವನ್ನು ಪಾವತಿಸುವ ಬಾಧ್ಯತೆಯನ್ನು ಪೂರೈಸಲು ವಿಫಲವಾಗಿದ್ದಾರೆ ಎಂದಾರ್ಥ, ಅಂತಹ ನಷ್ಟಕ್ಕೆ ಡಿಪಿಯನ್ನು ಜವಾಬ್ದಾರರಾಗಿಸಲು ಸಾಧ್ಯವಿಲ್ಲ.

## 12. ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ಗಳಿಗೆ ಸಂಬಂಧಿಸಿದಂತೆ ನಾನು ಯಾವ ಮುನ್ನೆಚ್ಚರಿಕೆಗಳನ್ನು ಗಮನಿಸಬೇಕು?

ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ಸ್ ನಿಮ್ಮ ಬ್ಯಾಂಕ್ ಖಾತೆ ಚೆಕ್ ಬುಕ್ ಅನ್ನು ಹೋಲುತ್ತದೆ. ಡಿಐಎಸ್ ವಿಷಯದಲ್ಲಿ ನೀವು ಕೆಳಗಿನ ಅಂಶಗಳ ಬಗ್ಗೆ ಕಾಲಜಿ ವಹಿಸಬೇಕು -

ಎ. ನಿಮ್ಮ ಡಿಪಿಯಿಂದ ಡಿಐಎಸ್ ಪುಸ್ತಕವನ್ನು ಪಡೆಯುವುದಾಗಿ ಖಚಿತಪಡಿಸಿಕೊಳ್ಳಿ. ಸಡಿಲವಾದ ಸ್ಲಿಪ್ಸ್ ಅನ್ನು ಸ್ವೀಕರಿಸಬೇಡಿ (ತುರ್ತು ಸಂದರ್ಭಗಳಲ್ಲಿ ಅಗತ್ಯವಿದ್ದರೆ ಮಾತ್ರ).

ಬಿ. ಪ್ರತಿ ಡಿಐಎಸ್ ಮುಂಚಿತವಾಗಿ ಮುದ್ರಿಸಲಾಗಿದೆಯೆ ಮತ್ತು ಕ್ರಮವಾಗಿ ಸಂಖ್ಯೆಯಿದೆ ಎಂದು ಖಚಿತಪಡಿಸಿಕೊಳ್ಳಿ.

ಸಿ. ಪ್ರತಿ ಡಿಐಎಸ್ ಮೇಲೆ ನಿಮ್ಮ ಕ್ಲೈಂಟ್ ಐಡಿ ಪೂರ್ವ-ಸ್ಟಾಂಪ್ ಆಗಿದೆ ಅಥವಾ ಪೂರ್ವ-ಮುದ್ರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಿ.

ಡಿ. ನಿಮ್ಮ ಡಿಐಎಸ್ ಅನ್ನು ಬೇರೆ ಯಾರೊಂದಿಗೂ ಬಿಡಬೇಡಿ. ನೀವು ಹಾಗೆ ಮಾಡಬೇಕಾದಾಗ ಅದನ್ನು ತುಂಬಿ ನಿಮ್ಮ ಡಿಪಿಗೆ ಒಪ್ಪಿಸಿ.

ಇ. ನಿಮ್ಮ ಡಿಐಎಸ್ ಪುಸ್ತಕವನ್ನು ಸುರಕ್ಷಿತವಾಗಿ ಇರಿಸಿ. ಯಾವುದೇ ಸ್ಲಿಪ್ ಅಥವಾ ಬುಕ್ಲೆಟ್ ಅನ್ನು ನೀವು ಕಳೆದುಕೊಂಡರೆ ಅಥವಾ ತಪ್ಪು ಜಾಗದಲ್ಲಿ ಇಟ್ಟು ಕಳೆದುಕೊಂಡರೆ, ದಯವಿಟ್ಟು ತಕ್ಷಣ ನಿಮ್ಮ ಡಿಪಿಗೆ ಬರವಣಿಗೆಯಲ್ಲಿ ತಿಳಿಸಿ.

ಎಫ್. ಒಂದು ವೇಳೆ ಡಿಐಎಸ್ ಒಂದಕ್ಕಿಂತ ಹೆಚ್ಚು ಸೂಚನೆಗಳನ್ನು ನಮೂದಿಸಲು ಜಾಗ(ಸಾಲುಗಳು) ಇದ್ದು ಅದನ್ನು ನೀವು ಬಳಸುತ್ತಿಲ್ಲವಾದರೆ, ಇತರರಿಂದ ದುರ್ಬಳಕೆವಾಗುವುದನ್ನು ತಪ್ಪಿಸಲು ನಿಮ್ಮ ಡಿಪಿಗೆ ಹಸ್ತಾಂತರಿಸುವ ಮೊದಲು ದಯವಿಟ್ಟು ಯಾವುದೇ ಬಳಸದಿರುವ ಸಾಲುಗಳನ್ನು / ಜಾಗವನ್ನು ಕಾಟು ಹಾಕುವುದನ್ನು ಮರೆಯದಿರಿ.

ಜಿ. ಎಲ್ಲಾ ಅಗತ್ಯ ವಿವರಗಳೊಂದಿಗೆ ಇನ್ಸ್ಟ್ರಕ್ಷನ್ ಸ್ಲಿಪ್ ಸರಿಯಾಗಿ ತುಂಬಿರುವುದನ್ನು ಮತ್ತು ಎಲ್ಲ ಜಂಟಿ ಹೋಲ್ಡರ್ ಸಹಿ ಮಾಡಿರುವುದಾಗಿ ಅದನ್ನು ನಿಮ್ಮ ಡಿಪಿಗೆ ಹಸ್ತಾಂತರಿಸುವ ಮೊದಲು ಖಚಿತಪಡಿಸಿಕೊಳ್ಳಿ.

### 13. ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ನಲ್ಲಿ ನೀಡಿದ 'ಎಕ್ಸಿಕ್ಯೂಷನ್ ದಿನಾಂಕ' ಎಂದರೇನು?

ಎಕ್ಸಿಕ್ಯೂಷನ್ ದಿನಾಂಕವು ನಿಮ್ಮ ಖಾತೆಯಿಂದ ಸೆಕ್ಯುರಿಟೀಸ್ ವಾಸ್ತವವಾಗಿ ಡೆಬಿಟ್ ಮಾಡುವ ದಿನಾಂಕವಾಗಿರುತ್ತದೆ. ಡೆಲಿವರಿ ಇನ್ಸ್ಟ್ರಕ್ಷನ್ ಸ್ಲಿಪ್ನಲ್ಲಿ ಬರೆದಿರುವ ಎಕ್ಸಿಕ್ಯೂಷನ್ ದಿನಾಂಕದಂದು ಈ ಸೂಚನೆಯು ಕಾರ್ಯಗತಗೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಲು, ಡಿಪಾಸಿಟರಿ ಸಿಸ್ಟಮ್ನಲ್ಲಿ ಡಿಪಿ ಇದನ್ನು ನಮೂದಿಸಬೇಕು. ನಿಮ್ಮ ಖಾತೆಯಿಂದ ಸೆಕ್ಯುರಿಟೀಸ್ ಡೆಬಿಟ್ ಮಾಡಲು ನೀವು ಬಯಸುವ ದಿನಾಂಕದ ಮುಂಚಿತವಾಗಿ ನೀವು ಸೂಚನೆಯನ್ನು ನೀಡಬಹುದು (ಡಿಐಎಸ್ನಲ್ಲಿ ನಮೂದಿಸಲಾದ ಎಕ್ಸಿಕ್ಯೂಷನ್ ದಿನಾಂಕದಂದು ಮಾತ್ರ ನಿಮ್ಮ ಖಾತೆಯನ್ನು ಡೆಬಿಟ್ ಮಾಡಲಾಗುವುದು).

### 14. ಭವಿಷ್ಯದ ಎಕ್ಸಿಕ್ಯೂಷನ್ ದಿನಾಂಕದೊಂದಿಗೆ ಡೆಲಿವರಿ ಸೂಚನೆ ನೀಡುವ ಮೂಲಕ ನಾನು ಯಾವ ಪ್ರಯೋಜನ ಪಡೆಯುತ್ತೇನೆ?

ಭವಿಷ್ಯದ ದಿನಾಂಕದ ಸೂಚನೆಗಳನ್ನು ನೀಡುವ ಮೂಲಕ ಸಮಯದ ಕೊರತೆ ಅಥವಾ ಕೊನೆಯ ನಿಮಿಷದ ವಿಪರೀತ ಗದ್ದಲದ ಕಾರಣದಿಂದ ಸೂಚನೆಯ ಕಾರ್ಯಗತವಾಗದಿರುವ ಅಪಾಯವನ್ನು ತಪ್ಪಿಸಬಹುದು. ನಿಮ್ಮ ಆಯ್ಕೆಯ ದಿನದಂದು ಉದ್ದೇಶಿತ ಫಲಾನುಭವಿಯ ಖಾತೆಗೆ ಷೇರುಗಳನ್ನು ಇತ್ಯಾದಿಗಳನ್ನು ವರ್ಗಾಯಿಸಲಾಗುವುದು ಎಂದು ಖಚಿತಪಡಿಸಿಕೊಳ್ಳಲು ನೀವು ಈ ಸೌಲಭ್ಯವನ್ನು ಬಳಸಲು ಬಯಸಬಹುದು.

### 15. ಆಫ್ ಮಾರ್ಕೆಟ್ ವರ್ಗಾವಣೆಗೆ ಸಂಬಂಧಿಸಿದಂತೆ 'ಕಾರಣ / ಉದ್ದೇಶ' ಮತ್ತು 'ಪರಿಗಣನೆ' ಎಂದರೇನು?

ಸೆಬಿಯ ಮಾರ್ಗಸೂಚಿಗಳ ಅನುಸಾರ, ಆಫ್ ಮಾರ್ಕೆಟ್ ವರ್ಗಾವಣೆ ಕೈಗೊಳ್ಳಲು ಬೇಕಾದ ಕಾರಣ ಅಥವಾ ಉದ್ದೇಶ ಮತ್ತು ಅಂತಹ ವರ್ಗಾವಣೆಗೆ ಪರಿಗಣನೆಯನ್ನು ಡೆಲಿವರಿ ಸೂಚನಾ ಸ್ಲಿಪ್ನಲ್ಲಿ ಅಂತಹ ವರ್ಗಾವಣೆಗೆ ಉಲ್ಲೇಖಿಸಬೇಕಾಗಿದೆ. 'ಕಾರಣ / ಉದ್ದೇಶ' ಗಾಗಿ ಡಿಐಎಸ್ ಬುಕ್ಲೆಟ್ನಲ್ಲಿ ವಿವಿಧ ಆಯ್ಕೆಗಳು ನೀಡಲಾಗಿವೆ. ನೀವು ಸೂಕ್ತವಾದದನ್ನು ಆಯ್ಕೆ ಮಾಡಿ ಅದನ್ನು ಡಿಐಎಸ್ನಲ್ಲಿ ಉಲ್ಲೇಖಿಸಬೇಕು. ವರ್ಗಾವಣೆಯ ಕಾರಣ / ಉದ್ದೇಶವು 'ಆಫ್ ಮಾರ್ಕೆಟ್ ಮಾರಾಟ' ಆಗಿದ್ದರೆ ಪರಿಗಣಿಸಿದ ಮೊತ್ತಕ್ಕೆ ಹೆಚ್ಚುವರಿಯಾಗಿ, ನೀವು ಈ ಕೆಳಗಿನ ವಿವರಗಳನ್ನು ನಮೂದಿಸಬೇಕು -

ಎ. ಪಾವತಿ ದಿನಾಂಕ.

ಬಿ. ಪಾವತಿಯ ವಿಧಾನ (ನಗದು, ಚೆಕ್ ಅಥವಾ ಎಲೆಕ್ಟ್ರಾನಿಕ್ ಪಾವತಿ).

ಸಿ. ಪಾವತಿಯ ವಿಧಾನ ಚೆಕ್ ಅಥವಾ ಎಲೆಕ್ಟ್ರಾನಿಕ್ ಪಾವತಿಯಾಗಿದ್ದಲ್ಲಿ, ಟ್ರಾನ್ಸ್ಫರೀ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಎಲೆಕ್ಟ್ರಾನಿಕ್ ಪಾವತಿಗಳಿಗೆ ವಹಿವಾಟಿನ ರೆಫರೆನ್ಸ್ ಸಂಖ್ಯೆ ಅಥವಾ ಚೆಕ್ ಪಾವತಿಗಾಗಿ ಚೆಕ್ ಸಂಖ್ಯೆ ಅಗತ್ಯವಿರುತ್ತದೆ.

## ಸೆಕ್ಯುರಿಟೀಸ್ಗಳ ವರ್ಗಾವಣೆ

1. ಡಿಮ್ಯಾಟ್ ಖಾತೆಗಳಿಗೆ ಸಂಬಂಧಿಸಿದಂತೆ ವರ್ಗಾವಣೆ ಎಂದರೇನು?

ಮರಣ ಹೊಂದಿದ ಖಾತೆದಾರರಿಗೆ ಸೇರಿದ ಸೆಕ್ಯುರಿಟೀಸ್ ಮರಣ ಹೊಂದಿದ ಖಾತೆದಾರರ ಬದುಕಿರುವ ಜಂಟಿ ಹೋಲ್ಡರ್ / ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ / ನಾಮಿನಿಗೆ ವರ್ಗಾವಣೆಗೊಳ್ಳುವ ಕಾನೂನು ಪ್ರಕ್ರಿಯೆಯಾಗಿದೆ. ಡಿಮೆಟಿರಿಯಲೈಸ್ಡ್ ಹೋಲ್ಡಿಂಗ್ಗಳ ಸಂದರ್ಭದಲ್ಲಿ ವರ್ಗಾವಣೆ ಪ್ರಕ್ರಿಯೆಯು ಅನುಕೂಲಕರ, ಅಂತರೆ ಡಿಮ್ಯಾಟ್ ಖಾತೆಯ ಎಲ್ಲ ಸೆಕ್ಯುರಿಟೀಸ್ ವರ್ಗಾವಣೆ ಕ್ರಮಗಳನ್ನು ಡಿಪಿಗೆ ಅಗತ್ಯವಿರುವ ದಾಖಲೆಗಳನ್ನು ಸಲ್ಲಿಸುವ ಮೂಲಕ ಪೂರ್ಣಗೊಳಿಸಬಹುದು. ಈ ಉದ್ದೇಶಕ್ಕಾಗಿ ವಿವಿಧ ಕಂಪೆನಿಗಳನ್ನು ಸಂಪರ್ಕಿಸಲು ಅಗತ್ಯವಿಲ್ಲ, ಏಕೆಂದರೆ ಸೆಕ್ಯುರಿಟೀಸ್ ಭೌತಿಕ ರೂಪದಲ್ಲಿ ಇದ್ದಾಗ ಅಗತ್ಯವಿರುತ್ತದೆ.

ಖಾತೆದಾರನ ಸಾವಿನ ನಂತರ (ಏಕೈಕ ಹೋಲ್ಡರ್ ಅಥವಾ ಜಂಟಿ ಹೋಲ್ಡರ್), ಹೇಗೆ ವರ್ಗಾವಣೆ ನಡೆಯುತ್ತದೆ ಎಂಬುವುದು ಚಿತ್ರ ಸಂಖ್ಯೆ 6ರಲ್ಲಿ ವಿವರಿಸಲಾಗಿದೆ -

ವರ್ಗಾವಣೆ

| ಸಂದರ್ಭ | ವರ್ಗಾವಣೆ ಯಾರ ಪರವಾಗಿ | |
|---|---|---|
| | ನಾಮನಿರ್ದೇಶನ ನೀಡಿದ್ದು | ನಾಮನಿರ್ದೇಶನ ನೀಡದ್ದಿದರೆ |
| ಏಕೈಕ ಹೋಲ್ಡರ್ನ ಮರಣ | ನಾಮಿನಿ | ಕಾನೂನುಬದ್ಧ ಉತ್ತರಾಧಿಕಾರಿ (ಉತ್ತರಾಧಿಕಾರದ ಪ್ರಮಾಣಪತ್ರ, ಮರಣ ಪತ್ರದ ದಾಖಲೆ, ಆಡಳಿತ ಪತ್ರದ ಆಧಾರದ ಮೇಲೆ) |
| ಜಂಟಿ ಹೋಲ್ಡರ್ ಅಲ್ಲಿ ಒಬ್ಬರ ಮರಣ | ಬದುಕಿರುವ ಜಂಟಿ ಹೋಲ್ಡರ್(ಹೋಲ್ಡರ್ಸ್) | ಬದುಕಿರುವ ಜಂಟಿ ಹೋಲ್ಡರ್(ಹೋಲ್ಡರ್ಸ್) |
| ಎಲ್ಲ ಜಂಟಿ ಹೋಲ್ಡರ್ ಅವರ ಮರಣ | ನಾಮಿನಿ | ಕಾನೂನುಬದ್ಧ ಉತ್ತರಾಧಿಕಾರಿ (ಉತ್ತರಾಧಿಕಾರದ ಪ್ರಮಾಣಪತ್ರ, ಮರಣ ಪತ್ರದ ದಾಖಲೆ, ಆಡಳಿತ ಪತ್ರದ ಆಧಾರದ ಮೇಲೆ) |

ಚಿತ್ರ 6

2. ಏಕೈಕ ಖಾತೆದಾರನ ಮರಣದ ಸಂದರ್ಭದಲ್ಲಿ ಸೆಕ್ಯುರಿಟೀಸ್ ನಾಮಿನಿಗೆ ವರ್ಗಾಯಿಸುವ ವಿಧಾನ ಏನು?

ಏಕೈಕ ಹೋಲ್ಡರ್ನ ಸಾವಿನ ಸಂದರ್ಭದಲ್ಲಿ, ಸೆಕ್ಯುರಿಟೀಸ್ ವರ್ಗಾವಣೆಗೆ ನೋಟರಿ ಪಬ್ಲಿಕ್ ಅಥವಾ ಗಝೆಟೆಡ್ ಅಧಿಕಾರಿನಿಂದ ದೃಢೀಕರಿಸಿದ ಮರಣ ಪ್ರಮಾಣಪತ್ರದ ಕಾಪಿ ಜೊತೆಗೆ ಪೂರ್ಣವಾಗಿ ತುಂಬಿದ ವರ್ಗಾವಣೆಗೆ ಫಾರಂ ಅನ್ನು

ಸಲ್ಲಿಸಬೇಕು. ಕ್ಲೇಮ್ ಮಾಡುವವರ ಖಾತೆಯು ಅದೇ ಪಾರ್ಟಿಸಿಪೇಂಟ್ ಅಲ್ಲಿ ಇಲ್ಲದಿದ್ದರೆ, ಕ್ಲೇಮ್ ಮಾಡುವವರ ಖಾತೆಯ (ಸಂಬಂಧಪಟ್ಟ ಡಿಪಿ ಯಿಂದ ಪ್ರಮಾಣೀಕರಿಸಲ್ಪಟ್ಟ) ಕ್ಲೈಂಟ್ ಮಾಸ್ಟರ್ ರಿಪೋರ್ಟ್ನ ನಕಲು ಸಹ ಬೇಕಾಗಿತ್ತದೆ. ಈ ದಾಖಲೆಗಳ ಪರಿಶೀಲನೆಯ ನಂತರ, ಡಿಪಿಯು ಸೆಕ್ಯುರಿಟೀಸ್ ಅನ್ನು ನಾಮಿನಿಯ ಡಿಮ್ಯಾಟ್ ಖಾತೆಗೆ ವರ್ಗಾಯಿಸುತ್ತದೆ.

### 3. ಏಕೈಕ ಹೋಲ್ಡರ್ ಹೊಂದಿರುವ ಡಿಮ್ಯಾಟ್ ಖಾತೆಗೆ ನಾಮನಿರ್ದೇಶನವಿಲ್ಲದಿದ್ದರೆ ಏನಾಗುತ್ತದೆ?

ಅಂತಹ ಸಂದರ್ಭದಲ್ಲಿ, ಸೆಕ್ಯುರಿಟೀಸ್ ಕಾನೂನುಬದ್ಧ ಉತ್ತರಾಧಿಕಾರಿಯ(ರು) ಖಾತೆಗೆ ವರ್ಗಾಯಿಸಲಾಗುತ್ತದೆ, ಇದು ಸಮರ್ಥ ನ್ಯಾಯಾಲಯದ ಆದೇಶದಂತೆ ನಿರ್ಧರಿಸಬಹುದು. ಈ ಉದ್ದೇಶಕ್ಕಾಗಿ ಕೆಳಗಿನ ದಾಖಲೆಗಳ ಅಗತ್ಯವಿದೆ -

ಎ. ಸಂಪೂರ್ಣ ತುಂಬಿದ ವರ್ಗಾವಣೆ ಫಾರಂ.

ಬಿ, ನೋಟರಿ ಪಬ್ಲಿಕ್ನಿಂದ ಅಥವಾ ಗೆಝೆಟೆಡ್ ಅಧಿಕಾರಿನಿಂದ ದೃಢೀಕರಿಸಿದ ಮರಣ ಪ್ರಮಾಣಪತ್ರದ ನಕಲು.

ಸಿ. ನೋಟರಿ ಪಬ್ಲಿಕ್ನಿಂದ ಅಥವಾ ಗೆಝೆಟೆಡ್ ಅಧಿಕಾರಿ ಅಥವಾ ದೃಢೀಕರಿಸಿದ ಉತ್ತರಾಧಿಕಾರ ಪತ್ರದ ನಕಲು ಅಥವಾ

ಡಿ. ಮರಣ ಹೊಂದಿದವರು ವಿಲ್ ಬರೆಯದಿದ್ದಲ್ಲಿ ಸಮರ್ಥ ನ್ಯಾಯಾಲಯದ ಆದೇಶ ಅಥವಾ

ಇ. ವಿಲ್ ಸಾಕ್ಷಿಯ ನಕಲು ಅಥವಾ

ಎಫ್. ನೋಟರಿ ಪಬ್ಲಿಕ್ನಿಂದ ಅಥವಾ ಗೆಝೆಟೆಡ್ ಅಧಿಕಾರಿನಿಂದ ದೃಢೀಕರಿಸಲ್ಪಟ್ಟ ಆಡಳಿತಾತ್ಮಕ ಪತ್ರ

ಜಿ. ಕ್ಲೇಮ್ ಮಾಡುವವರ ಖಾತೆಯು ಅದೇ ಪಾರ್ಟಿಸಿಪೇಂಟ್ ಅಲ್ಲಿ ಇಲ್ಲದಿದ್ದರೆ, ಕ್ಲೇಮ್ ಮಾಡುವವರ ಖಾತೆಯ (ಸಂಬಂಧಪಟ್ಟ ಡಿಪಿ ಯಿಂದ ಪ್ರಮಾಣೀಕರಿಸಲ್ಪಟ್ಟ) ಕ್ಲೈಂಟ್ ಮಾಸ್ಟರ್ ರಿಪೋರ್ಟ್ನ ನಕಲು ಸಹ ಬೇಕಾಗಿತ್ತದೆ.

ಆದರೂ, ವರ್ಗಾವಣೆ ಮಾಡುವ ಸೆಕ್ಯುರಿಟೀಸ್ಗಳ ಮೌಲ್ಯವು ರೂ. 5,00,000 / -ಗಿಂತ ಕಡಿಮೆಯಾಗಿದ್ದರೆ (ವರ್ಗಾವಣೆ ಅರ್ಜಿಯ ದಿನದಂದು), ಡಿಪಿ ಕೆಳಗಿನ ದಾಖಲೆಗಳ ಆಧಾರದ ಮೇಲೆ ವಿನಂತಿಯನ್ನು ಪ್ರಕ್ರಿಯೆಗೊಳಿಸಬಹುದು.

ಎ. ಸಂಪೂರ್ಣ ತುಂಬಿದ ವರ್ಗಾವಣೆ ಫಾರಂ.

ಬಿ. ನೋಟರಿ ಪಬ್ಲಿಕ್ನಿಂದ ಅಥವಾ ಗೆಝೆಟೆಡ್ ಅಧಿಕಾರಿನಿಂದ ದೃಢೀಕರಿಸಿದ ಮರಣ ಪ್ರಮಾಣಪತ್ರದ ನಕಲು.

ಸಿ. ನಷ್ಟಭರ್ತಿ ಪತ್ರ (ನಿಗದಿತ ರೂಪದಲ್ಲಿ).

ಡಿ. ಅಫಿಡವಿಟ್ (ನಿಗದಿತ ರೂಪದಲ್ಲಿ) ಮತ್ತು

ಇ. ನಿಗದಿತ ರೂಪದಲ್ಲಿ ನಿರಾಕ್ಷೇಪಣ ಪತ್ರ ಅಥವಾ ಕುಟುಂಬ ಸೆಟ್ಲ್ಮೆಂಟ್ ಡೀಡ್

ಎಫ್. ಕ್ಲೇಮ್ ಮಾಡುವವರ ಖಾತೆಯು ಅದೇ ಪಾರ್ಟಿಸಿಪೇಂಟ್ ಅಲ್ಲಿ ಇಲ್ಲದಿದ್ದರೆ, ಕ್ಲೇಮ್ ಮಾಡುವವರ ಖಾತೆಯ (ಸಂಬಂಧಪಟ್ಟ ಡಿಪಿ ಯಿಂದ ಪ್ರಮಾಣೀಕರಿಸಲ್ಪಟ್ಟ) ಕ್ಲೈಂಟ್ ಮಾಸ್ಟರ್ ರಿಪೋರ್ಟ್ನ ನಕಲು ಸಹ ಬೇಕಾಗಿತ್ತದೆ.

## 4. ಒಬ್ಬ ಅಥವಾ ಹೆಚ್ಚು ಜಂಟಿ ಹೋಲ್ಡರ್ ಅವರ ಮರಣದ ಸಂದರ್ಭದಲ್ಲಿ ವರ್ಗಾವಣೆಯ ವಿಧಾನವೇನು?

ಅಂತಹ ಸಂದರ್ಭದಲ್ಲಿ, ಸೆಕ್ಯುರಿಟೀಸ್ ಅನ್ನು  ನಾಮನಿರ್ದೇಶನವನ್ನು ಹೊರತುಪಡಿಸಿ ಜೀವಂತ ಉಳಿದಿರುವ ಹೋಲ್ಡರ್ (ಗಳಿಗೆ)` ವರ್ಗಾಯಿಸಲಾಗುತ್ತದೆ. ಉದಾಹರಣೆಗೆ, ಶ್ರೀ ಎ, ಶ್ರೀ ಬಿ ಮತ್ತು ಶ್ರೀಮತಿ ಸಿ ಅವರ ಜಂಟಿ ಹೆಸರಿನಲ್ಲಿ ಖಾತೆಯು ಇದ್ದಲ್ಲಿ, ಶ್ರೀ. ಬಿ ಅವರ ಮರಣದ ಸಂದರ್ಭದಲ್ಲಿ, ಸೆಕ್ಯುರಿಟೀಸ್ ಬದುಕಿರುವ ಹೋಲ್ಡರ್ಗೆ ವರ್ಗಾಯಿಸಲಾಗುತ್ತದೆ, ವರ್ಗಾಯಿಸಲಾಗುತ್ತದೆ,ಅಂದರೆ ಶ್ರೀ. ಎ ಮತ್ತು ಶ್ರೀಮತಿ. ಸಿ. ಬದುಕಿರುವ ಹೋಲ್ಡರ್(ಗಳು) ಈ ಕೆಳಗಿನ ದಾಖಲೆಗಳನ್ನು ಡಿಪಿಗೆ ಸಲ್ಲಿಸಬೇಕಾಗಬಹುದು:

ಎ. ಸಂಪೂರ್ಣ ತುಂಬಿದ ವರ್ಗಾವಣೆ ಫಾರಂ.

ಬಿ. ನೋಟರಿ ಪಬ್ಲಿಕ್ನಿಂದ ಅಥವಾ ಗೆಝೆಟೆಡ್ ಅಧಿಕಾರಿನಿಂದ ದೃಢೀಕರಿಸಿದ ಮರಣ ಪ್ರಮಾಣಪತ್ರದ ನಕಲು.

ಮೇಲಿನ ದಾಖಲೆಗಳನ್ನು ಪರಿಶೀಲನೆ ಮಾಡಿ ಸ್ವತಃ ತೃಪ್ತಿಪಡಿಸಿದ ನಂತರ, ಡಿಪಿ ಸೆಕ್ಯುರಿಟೀಸ್ ಅನ್ನು ಬದುಕಿರುವ ಹೋಲ್ಡರ್ (ಗಳ) ಖಾತೆಗೆ ವರ್ಗಾಯಿಸಿ, ಸತ್ತವರ ಖಾತೆಯನ್ನು ಮುಚ್ಚುತ್ತದೆ.

## 5. ವರ್ಗಾವಣೆ ಕಮ್ ಡಿಮ್ಯಾಟ್ ಎಂದರೇನು?

'ವರ್ಗಾವಣೆ ಕಮ್ ಡಿಮ್ಯಾಟ್' ಎಂಬುದು ಭೌತಿಕ ರೂಪದಲ್ಲಿ ಸೆಕ್ಯುರಿಟೀಸ್ ಉಲ್ಲೇಖಿಸಲಾದ ಜಂಟಿದಾರರಲ್ಲಿ ಒಬ್ಬರು ಮತ್ತು ಉಳಿದಿರುವ ಹೋಲ್ಡರ್ ತಮ್ಮ ಹೆಸರಿನಲ್ಲಿ ಡಿಮ್ಯಾಟ್ ರೂಪದಲ್ಲಿ ವರ್ಗಾವಣೆ ಬಯಸಿದಾಗ ಬಹಳ ಉಪಯುಕ್ತ ಸೌಲಭ್ಯವಾಗಿದೆ. ಈ ಸೌಲಭ್ಯವನ್ನು ಬಳಸಿಕೊಂಡು ಮೃತರ ಜಂಟಿದಾರರ ಹೆಸರನ್ನು ಅಳಿಸುವ ಮತ್ತು ಸೆಕ್ಯೂರಿಟಿಗಳ ಡಿಮೆಟಿರಿಯಲೈಸೇಶನ್ ಅನ್ನು ಎರಡು ಉದ್ದೇಶಗಳು ಒಂದೇ ಹಂತದಲ್ಲಿ ಸಾಧಿಸಬಹುದು. ಇದನ್ನು ಚಿತ್ರ ಸಂಖ್ಯೆ 7 ರಲ್ಲಿ ವಿವರಿಸಲಾಗಿದೆ -

ವರ್ಗಾವಣೆ ಕಮ್ ಡಿಮ್ಯಾಟ್ ಸೌಲಭ್ಯ

| ಷೇರು ಪ್ರಮಾಣಪತ್ರ | ಸಂದರ್ಭದಲ್ಲಿ | ಡಿಮ್ಯಾಟ್ ಖಾತೆ |
|---|---|---|
| ಎ ಮತ್ತು ಬಿ<br>ಅಥವಾ<br>ಬಿ ಮತ್ತು ಎ | ಒಬ್ಬ ಹೋಲ್ಡರ್ ಮರಣದ ಸಂದರ್ಭದಲ್ಲಿ - ಎ | ಬಿ |
| ಎ, ಬಿ ಮತ್ತು ಸಿ (ಯಾವುದೇ ಕ್ರಮ) | ಇಬ್ಬರೂ ಹೋಲ್ಡರ್ ಮರಣದ ಸಂದರ್ಭದಲ್ಲಿ - ಎ ಮತ್ತು ಬಿ | ಸಿ |

ನಿಮ್ಮ ಡಿಪಿಗೆ ಮರಣ ಪ್ರಮಾಣಪತ್ರ (ಗಳು) ಮತ್ತು ವರ್ಗಾವಣೆ ವಿನಂತಿಯೊಂದಿಗೆ ಡಿ.ಆರ್.ಎಫ್ ಅನ್ನು ಸಲ್ಲಿಸಿ

ಚಿತ್ರ 7

## ನಾಮನಿರ್ದೇಶನ

### 1. ನಾಮನಿರ್ದೇಶನ ಎಂದರೇನು?

ನಾಮನಿರ್ದೇಶನವು ಸೆಕ್ಯುರಿಟೀಸ್ ಹೋಲ್ಡರ್ ಅವನ / ಅವಳ ಮರಣದ ಸಂದರ್ಭದಲ್ಲಿ ಈ ಸೆಕ್ಯುರಿಟೀಸ್ ಯಾರು ಪಡೆಯಬೇಕು ಎಂಬುದರ ಬಗ್ಗೆ ಅವನ / ಅವಳ ಆದ್ಯತೆಗಳನ್ನು ತಿಳಿಸುವ ಸರಳ ಪ್ರಕ್ರಿಯೆಯಾಗಿದೆ. ಡಿಮ್ಯಾಟ್ ಖಾತೆಗೆ ಸಂಬಂಧಿಸಿದಂತೆ ನಾಮನಿರ್ದೇಶನ ಪ್ರಕ್ರಿಯೆಯನ್ನು ಡಿಮ್ಯಾಟ್ ಖಾತೆ ತೆರೆಯುವ ಸಮಯದಲ್ಲಿ ಅಥವಾ ನಂತರ ಯಾವುದೇ ಸಮಯದಲ್ಲಿ ಮಾಡಬಹುದು.

### 2. ಯಾರು ನಾಮನಿರ್ದೇಶನ ಮಾಡಬಹುದು?

ಏಕ ಅಥವಾ ಜಂಟಿಯಾಗಿ ಡಿಮ್ಯಾಟ್ ಖಾತೆಯನ್ನು ಹೊಂದಿರುವ ವ್ಯಕ್ತಿಗಳು ಮಾತ್ರ ನಾಮನಿರ್ದೇಶನವನ್ನು ಮಾಡಬಹುದು. ಮಂಡಲಿ, ಟ್ರಸ್ಟ್, ಕಾರ್ಪೋರೇಟ್ ಸಂಸ್ಥೆ, ಪಾಲುದಾರಿಕೆ ಸಂಸ್ಥೆ, ಹಿಂದು ಅನುವಂಶಿಕ ಕುಟುಂಬದ ಕರ್ತಾ ಮತ್ತು ಪವರ್ ಆಫ್ ಅಟಾರ್ನಿ ಹೋಲ್ಡರ್ನಂತಹ ವೈಯಕ್ತಿಕವಲ್ಲದ ಮಾಲೀಕರು ನಾಮನಿರ್ದೇಶನ ಮಾಡಲಾರರು.

### 3. ಜಂಟಿ ಹೋಲ್ಡರ್ ನಾಮನಿರ್ದೇಶನ ಮಾಡಬಹುದೇ?

ಹೌದು. ಜಂಟಿ ಹೋಲ್ಡರ್ ಖಾತೆಗಳಿಗೆ ನಾಮನಿರ್ದೇಶನವನ್ನು ಅನುಮತಿಸಲಾಗಿದೆ. ಹೇಗಾದರೂ, ಯಾವುದೇ ಒಬ್ಬ ಜಂಟಿ ಹೋಲ್ಡರ್ ಸಾವಿನ ಸಂದರ್ಭದಲ್ಲಿ, ಸೆಕ್ಯುರಿಟೀಸ್ ಬದುಕಿರುವ ಹೋಲ್ಡರ್ಗೆ (ಗಳು) ವರ್ಗಾಯಿಸಲಾಗುತ್ತದೆ. ಎಲ್ಲಾ ಜಂಟಿ ಹೋಲ್ಡರ್ ಮರಣದ ಸಂದರ್ಭದಲ್ಲಿ ಮಾತ್ರ, ಸೆಕ್ಯುರಿಟೀಸ್ ನಾಮಿನಿಗೆ ವರ್ಗಾಯಿಸಲಾಗುತ್ತದೆ (ನಾಮನಿರ್ದೇಶನವನ್ನು ನೀಡಿದರೆ, ಅಥವಾ ಕಾನೂನುಬದ್ಧ ಉತ್ತರಾಧಿಕಾರಿಗೆ).

### 4. ಎನ್.ಆರ್.ಐ. ನಾಮನಿರ್ದೇಶನ ಮಾಡಬಹುದೇ?

ಹೌದು, ಎನ್.ಆರ್.ಐ. ನೇರವಾಗಿ ನಾಮನಿರ್ದೇಶನ ಮಾಡಬಹುದು. ಆದಾಗ್ಯೂ, ಎನ್.ಆರ್.ಐ. ಪರವಾಗಿ ಪವರ್ ಆಫ್ ಅಟಾರ್ನಿ ಹೋಲ್ಡರ್ ನಾಮನಿರ್ದೇಶನ ಮಾಡಲಾಗುವುದಿಲ್ಲ.

### 5. ಒಬ್ಬ ಮೈನರ್ ನಾಮನಿರ್ದೇಶನ ಮಾಡಬಹುದೇ?

ಇಲ್ಲ. ಮೈನರ್ ನೇರವಾಗಿ ಅಥವಾ ಅವರ ಪೋಷಕರಿಂದ ನಾಮನಿರ್ದೇಶನ ಮಾಡಲಾರರು.

### 6. ನಾಮನಿ ಯಾರಾಗಬಹುದು?

ಒಬ್ಬ ವ್ಯಕ್ತಿ ಮಾತ್ರ ನಾಮಿನಿಯಾಗಬಹುದು. ಮಂಡಲಿ, ಟ್ರಸ್ಟ್, ಕಾರ್ಪೋರೇಟ್ ಸಂಸ್ಥೆ, ಪಾಲುದಾರಿಕೆ ಸಂಸ್ಥೆ, ಹಿಂದು ಅನುವಂಶಿಕ ಕುಟುಂಬದ ಕರ್ತಾ ಮತ್ತು ಪವರ್ ಆಫ್ ಅಟಾರ್ನಿ ಹೋಲ್ಡರ್ ಡಿಮ್ಯಾಟ್ ಖಾತೆಯಲ್ಲಿ ನಾಮಿನಿಯಾಗಲು ಬರುವುದಿಲ್ಲ.

